ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಸಂಪುಟ 6 · ಸಂಚಿಕೆ 5
೧೮ ಅಕ್ಟೋಬರ್ ೧೯೫೮
★
ಪುಟ ೧೦ ಬೆಲೆ: ೧೩ ನಯೇ ಪೈಸೆ

ಆಹಾರ ಪರಿಸ್ಥಿತಿಗೆ ಸರಕಾರದ ಅನೀತಿಯೇ ಕಾರಣ

ಬಿಕ್ಕಟ್ಟನ್ನು ಎದುರಿಸಲು ತೀವ್ರ ಕ್ರಮ ಅಗತ್ಯ

ಅಕ್ಟೋಬರ್ 8ರಿಂದ 13ರವರೆಗೆ ಮದರಾಸಿನಲ್ಲಿ ಸಮಾವೇಶಗೊಂಡಿದ್ದ ಭಾರತ ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಲಿಯು ದೇಶದ ರಾಜಕೀಯ ಪರಿಸ್ಥಿತಿ ಮತ್ತು ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಚರ್ಚಿಸಿ ಮುಖ್ಯವಾದ ಗೊತ್ತುವಳಿಗಳನ್ನು ಅಂಗೀಕರಿಸಿದೆ. ಅವುಗಳ ಸಾರಾಂಶವನ್ನಿಲ್ಲಿ ಕೊಡಲಾಗಿದೆ.

ಆರಂಭದಲ್ಲಿ ರಾಷ್ಟ್ರೀಯ ಮಂಡಲಿಯು ಅಮೃತಸರ ಅಧಿವೇಶನದಿಂದೀಚೆಗೆ ಮದರಾಸ್, ಜಮ್‌ಷೆಡ್‌ಪುರ, ಗುಜರಾತ್ ಮತ್ತು ಲಕ್ನೋಗಳಲ್ಲಿ ನಡೆದ ಹೋರಾಟದಲ್ಲಿ ಪೋಲೀಸರ ಗೋಲಿಬಾರಿಗೆ ಆಹುತಿಯಾದ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನರ್ಪಿಸುವ ಗೊತ್ತುವಳಿಯನ್ನಂಗೀಕರಿಸಿತು.

ನಂತರ ಖ್ಯಾತ ಪಂಡಿತರೂ, ದೇಶಾಭಿಮಾನಿಯೂ ಆಗಿದ್ದ ಡಾ॥ ಭಗವಾನ್ ದಾಸ್‌ರವರ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯವೊಂದನ್ನು ಅನುಮೋದಿಸಲಾಯಿತು.

ಗೋವಾ ಸ್ವಾತಂತ್ರ್ಯ ಹೋರಾಟದ ನಾಯಕರಾಗಿದ್ದ ಶ್ರೀ ಟಿ. ಬಿ. ಕುನ್ಹಾರವರ ನಿಧನದ ಬಗ್ಗೆಯೂ ನಿರ್ಣಯವೊಂದನ್ನು ಸೂಚಿಸಿ ಸಂತಾಪ ವ್ಯಕ್ತಪಡಿಸಲಾಯಿತು.

ವಿಶ್ವಶಾಂತಿ ಕೌನ್ಸಿಲಿನ ಅಧ್ಯಕ್ಷರೂ, ಫ್ರೆಂಚ್ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸದಸ್ಯರೂ ಆಗಿದ್ದ ಫ್ರೆಡರಿಕ್ ಜೋಲಿಯೋ ಕ್ಯೂರಿಯವರ ನಿಧನದ ಬಗ್ಗೆ ಸಂತಾಪಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ದೇಶದ ಆಹಾರ ಪರಿಸ್ಥಿತಿ ಬಗ್ಗೆ

ದೇಶದ ಪ್ರಸ್ತುತ ಆಹಾರ ಪರಿಸ್ಥಿತಿಯು ದಿನೇದಿನೇ ಉಲ್ಬಣಿಸುತ್ತಿರುವುದರ ಬಗ್ಗೆ ತನ್ನ ಕಳವಳವನ್ನು ವ್ಯಕ್ತಗೊಳಿಸಿದೆ.

ಸರಕಾರವು ಆಹಾರ ಪರಿಸ್ಥಿತಿಯ ಬಗ್ಗೆ ಬೇಕಾದಷ್ಟು ಸಮಾಧಾನಕರ ಹೇಳಿಕೆಗಳನ್ನೀಯುತ್ತಿದ್ದರೂ ಸಹ ದಿನೇದಿನೇ ಬೆಲೆಗಳು ಏರುತ್ತಲೇ ಇವೆ. ಪಶ್ಚಿಮ ಬಂಗಾಳ, ಬಿಹಾರ ಮತ್ತು ಉತ್ತರ ಪ್ರದೇಶದಲ್ಲಿ ಆಹಾರ ಪರಿಸ್ಥಿತಿಯು ತೀವ್ರಗೊಂಡಿದೆ. ಕೇರಳದಲ್ಲಿ ಸರಕಾರವು ಯಶಸ್ವಿಯಾದ ಕ್ರಮಗಳನ್ನು ತೆಗೆದುಕೊಂಡಿದ್ದರೂ ಸಹ, ಇಂದು ಅಭಾವ ಪರಿಸ್ಥಿತಿ ತಲೆದೋರಿದೆ. ಆಹಾರ ಧಾನ್ಯಗಳು ಅಧಿ[illegible]ಗಳಲ್ಲಿಯೂ ಸಹ ಇಂದು ಬೆಲೆ ಏರುತ್ತಿದೆ.

ಆಹಾರ ಪರಿಸ್ಥಿತಿಯನ್ನು ಸಮರ್ಪಕವಾಗಿ ಬಗೆಹರಿಸಲಾರದೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಇಂದು ಅಮೇರಿಕದ ಗೋಧೀ ಸಾಲದಮೇಲೆ ಅವಲಂಬಿಸುತ್ತಿವೆ ಆಹಾರ ಪರಿಸ್ಥಿತಿ ತೀವ್ರಗೊಳ್ಳುತ್ತಿದ್ದರೂ ಸಹ ಸರಕಾರವು ದಳ್ಳಾಳಿಗಳ ಮೇಲೆ, ಲಾಭಕೋರರ ಮೇಲೆ ದಾಸ್ತಾನುಗಾರರ ಮೇಲೆ ಸೂಕ್ತಕ್ರಮ ತೆಗೆದುಕೊಳ್ಳಲು ಹಿಂಜರಿಯುತ್ತಿದೆ. ಸಾಕಷ್ಟು ಅಗ್ಗದರದ ಡಿಪೋಗಳನ್ನು ತೆರೆಯಲು ಸಹ ಸರಕಾರ ಕ್ರಮ ತೆಗೆದುಕೊಂಡಿಲ್ಲ. ತಾನೇ ನೇಮಿಸಿದ ಆಹಾರ ಧಾನ್ಯಗಳ ಪರಿಶೀಲನಾ ಆಯೋಗದ ಶಿಫಾರಸುಗಳನ್ನು ಸಹ ಸರಕಾರ ಪೂರ್ಣವಾಗಿ ಕಾರ್ಯಗತಮಾಡಿಲ್ಲ. ಸರಕಾರದ ಈ ನೀತಿಗಳಿಂದಾಗಿ ಇಂದು ಪರಿಸ್ಥಿತಿ ತೀವ್ರಗೊಂಡಿದೆ.

ಕೇಂದ್ರದಿಂದ ಕೇರಳಕ್ಕೆ ಸರಬರಾಜು ಮಾಡುತ್ತಿದ್ದ ಆಹಾರ ಧಾನ್ಯಗಳನ್ನು ಸಂಪೂರ್ಣವಾಗಿ ನಿಲ್ಲಿಸಿರುವುದು ತೀವ್ರ ಕಳವಳಕ್ಕೆ ಕಾರಣವಾಗಿದೆ. ಈರೀತಿ ನಿಲ್ಲಿಸಲಾಗಿರುವ ಕಮ್ಯೂನಿಸ್ಟ್ ಆಡಳಿತೆಯಲ್ಲಿರುವ ರಾಜ್ಯದ ಮೇಲೆ ಭೇದಭಾವ ಎಣಿಸುವ ನೀತಿಯಾಗಿದೆ. ಕೇರಳ ಸರಕಾರವು ಅಧಿಕ ಆಹಾರ ಉತ್ಪಾದನೆಯಿರುವ ಆಂಧ್ರ ರಾಜ್ಯದಿಂದ ಅಕ್ಕಿಯನ್ನು ಕೊಳ್ಳುವುದಕ್ಕೂ ಪ್ರತಿಬಂಧವನ್ನು ಹಾಕಿದೆ. ದಕ್ಷಿಣ ವಲಯದಿಂದ ಆಹಾರ ಧಾನ್ಯಗಳನ್ನು ಹೊರಗೆ ಕಳಿಸಕೂಡದೆಂದಿದ್ದರೂ ಸಹ ಕೇಂದ್ರ ಸರಕಾರವು ಅದನ್ನು ಮೀರಿ ಆಂಧ್ರ ರಾಜ್ಯದಿಂದ 1,50,000 ಟನ್ ಅಕ್ಕಿಯನ್ನು ಹೊರಗೆ ಕಳಿಸಲು ತೆಗೆದುಕೊಂಡಿದೆ. ದಕ್ಷಿಣ ವಲಯದಲ್ಲಿರುವ ಕೇರಳ ರಾಜ್ಯಕ್ಕೆ 700,000 ಟನ್ ಅಕ್ಕಿ ಬೇಕಾಗಿರುವಾಗ, ಆಂಧ್ರದಿಂದ ಕೇಂದ್ರವು ಅಕ್ಕಿಯನ್ನು ತೆಗೆದುಕೊಂಡಿರುವುದು ಅದರ ಭೇದ ನೀತಿಯ ಕುರುಹಾಗಿದೆ. ಇದರಿಂದಾಗಿ ದಕ್ಷಿಣ ವಲಯದ ನಿರ್ಮಾಣವು ನಿರರ್ಥಕವಾಗಿದೆ. ಇದರಿಂದಾಗಿ ಕೇರಳಕ್ಕೆ ತೀವ್ರವಾದ ಅನ್ಯಾಯವುಂಟಾಗಿದೆ [illegible] ನಿರ್ಣಯದಲ್ಲಿ ತಿಳಿಸಲಾಗಿದೆ.

ಮತ್ತು ಗೊತ್ತುವಳಿಯಲ್ಲಿ ಈ ಕೆಳಕಂಡ ಹತ್ತು ಅಂಶಗಳ ಸಲಹೆಗಳನ್ನು ಕೂಡಲೇ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜಾರಿಗೆ ತರಬೇಕೆಂದು ಒತ್ತಾಯಪಡಿಸಿದೆ.

1. ಜೀವನಾವಶ್ಯಕ ಪದಾರ್ಥಗಳ ಕಾಯಿದೆಯನ್ನು ಎಲ್ಲ ರಾಜ್ಯಗಳಿಗೂ ಅನ್ವಯಿಸಬೇಕು. ಮಿಲ್ಲುಗಳು, ಒಟ್ಟು ವ್ಯಾಪಾರಸ್ಥರು, ಭೂಮಾಲಿಕರು ಮತ್ತು ದಾಸ್ತಾನುಗಾರರ ಬಳಿಯಿರುವ ಎಲ್ಲ ದಾಸ್ತಾನನ್ನೂ ವಶಪಡಿಸಕೊಳ್ಳಬೇಕು. ಕಾಳಸಂತೆಖೋರರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕು.

2. ಪ್ರತಿ ಐದುನೂರು ಕುಟುಂಬಗಳನ್ನಾವರಿಸುವಂತೆ ಅಭಾವ ಪ್ರದೇಶಗಳಲ್ಲಿ ಅಗ್ಗದರದ ಅಂಗಡಿಗಳನ್ನು ತೆರೆಯಬೇಕು ಮತ್ತು ಗುರುತಿನ ಕಾರ್ಡುಗಳನ್ನು ಹಂಚಬೇಕು.

3. ತಿಂಗಳಿಗೆ 25,000 ಟನ್ನಿನಂತೆ ಕೇರಳಕ್ಕೆ ಅಕ್ಕಿ ಸರಬರಾಜು ಮಾಡಬೇಕು.

4. ಎಲ್ಲ ರಾಜಕೀಯ ಪಕ್ಷಗಳು ಮತ್ತು ಸಾಮೂಹಿಕ ಸಂಘಟನೆಗಳ ಪ್ರತಿನಿಧಿಗಳನ್ನೊಳಗೊಂಡ ಜನತಾ ಆಹಾರ ಸಮಿತಿಗಳನ್ನು ಎಲ್ಲ ಮಟ್ಟಗಳಲ್ಲೂ ರಚಿಸಬೇಕು. ಈ ಸಮಿತಿಗಳಿಗೆ ಅಗ್ಗದರದ ಅಂಗಡಿಗಳು ಮತ್ತು ಪರಿಹಾರ ಕ್ರಮಗಳ ಮೇಲೆ ಉಸ್ತುವಾರಿಕೆ ನಡೆಸಲು ಅಧಿಕಾರವಿರಬೇಕು.

5. ಬಡಜನರಿಗೆ ಉದ್ಯೋಗ ದೊರಕಿಸುವ ಮತ್ತು ಕೊಳ್ಳುವಂಥ ಶಕ್ತಿ ಈಯುವಂಥ ಸಾಕಷ್ಟು ಪರಿಹಾರ ಕಾಮಗಾರಿಗಳನ್ನು ಮತ್ತು ಅಭಿವೃದ್ಧಿ ಯೋಜನೆಗಳನ್ನೂ ಅಭಾವ ಪ್ರದೇಶಗಳಲ್ಲಿ ಆರಂಭಿಸಬೇಕು.

(ಕೊನೇ ಪುಟ ನೋಡಿ)

ಭಾರತ ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಲಿಯ ಗೊತ್ತುವಳಿ

ಹಟ್ಟಿ ಚಿನ್ನದ ಗಣಿ ಕಾರ್ಮಿಕರ ವಿಜಯ !

ಉಪವಾಸ ಮುಷ್ಕರ ಅಂತ್ಯ

ಸಂಘದ ಮಾನ್ಯತೆ ಮತ್ತು ಕಾರ್ಮಿಕರ ಬೇಡಿಕೆಗಳಿಗಾಗಿ ಕಳೆದ 37 ದಿನಗಳಿಂದ ನಡೆಯುತ್ತಿರುವ ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಮುಷ್ಕರವು ಯಶಸ್ವಿಯಾಗಿ ಮುಕ್ತಾಯಗೊಂಡಿದೆಯೆಂದು ತಿಳಿದುಬಂದಿದೆ. ಕಾರ್ಮಿಕರ ಬೇಡಿಕೆಗಳಿಗಾಗಿ 16 ದಿನಗಳಿಂದ ಉಪವಾಸ ಮುಷ್ಕರ ನಡೆಸುತ್ತಿದ್ದ ಸಂಘದ ಕಾರ್ಯದರ್ಶಿ ಶ್ರೀ ಪಿ. ನಾರಾಯಣರವರು ಅಕ್ಟೋಬರ 14ರಂದು ಉಪವಾಸ ಮುಷ್ಕರವನ್ನು ಅಂತ್ಯಗೊಳಿಸಿದರು.

ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಕೆ. ಎಸ್. ವಾಸನ್‌ರವರು ಸಂಧಾನ ನಡೆಸಿದ ಫಲವಾಗಿ 37 ದಿನಗಳ ಮುಷ್ಕರವು ಅಂತ್ಯಗೊಳ್ಳಲಿದೆ. ಸಂಘಕ್ಕೆ ಮಾನ್ಯತೆಯೀಯುವುದು, ಕಾರ್ಮಿಕರ ವೇತನಗಳಲ್ಲಿರುವ ಅಂತರವನ್ನು ಸರಿಪಡಿಸುವುದು, ತುಟ್ಟಿ ಭತ್ಯದ ಹೆಚ್ಚಳ, ಗ್ರಾಚ್ಯುಯಿಟಿ ಇತ್ಯಾದಿ ಪ್ರಶ್ನೆಗಳ ಬಗ್ಗೆ ಇತ್ಯರ್ಥಗೊಳಿಸಲು ಶ್ರೀ ಕೆ. ಎಸ್. ವಾಸನ್‌ರವರು ಜಾನ್ ಟೇಲರ್ ಕಂಪೆನಿಯ ಜಾನ್ ಟೇಲರ್, ಹಟ್ಟಿ ಚಿನ್ನದ ಗಣಿಯ ಸೂಪರಿಂಟೆಂಡೆಂಟ್ ಶ್ರೀ ನಾಗೇಶ ರಾವ್ ಮತ್ತು ಮುಖ್ಯಮಂತ್ರಿ ಶ್ರೀ ಜತ್ತಿಯವರೊಂದಿಗೆ ಮಾತುಕತೆ ನಡೆಸಿದರು. ಈ ಮಾತುಕತೆ ಫಲವಾಗಿ ಕೆಲವಂಶಗಳ ಮೇಲೆ ಒಪ್ಪಂದವಾಗಿದೆ. ಮ್ಯಾನೇಜ್‌ಮೆಂಟು ಹಟ್ಟಿ ಚಿನ್ನದ ಗಣಿ ಕೆಲಸಗಾರರ ಸಂಘಕ್ಕೆ ಮಾನ್ಯತೆ ಕೊಡುವುದು, ಸಂಘವು ನೈನಿತಾಲ್ ಲೇಬರ್ ಕಾನ್ಫರೆನ್ಸಿನಲ್ಲಿ ಒಪ್ಪಲಾಗಿರುವ ನಿಬಂಧನೆಗಳನ್ನು ಅನುಸರಿಸುವುದು, ಮುಷ್ಕರದಲ್ಲಿ ಭಾಗವಹಿಸಿದವರಲ್ಲಿ ಯಾರನ್ನೂ ಕೆಲಸದಿಂದ ತೆಗೆದುಹಾಕುವುದಿಲ್ಲ, ಕೆಲಸಗಾರರು ಕೆಲಸಕ್ಕೆ ಹಿಂತಿರುಗಲು ಒಂದು ವಾರ ಕಾಲಾವಕಾಶ ಕೊಡಲಾಗುವುದು, ಕಾರ್ಮಿಕರ ಎಲ್ಲ ಬೇಡಿಕೆಗಳನ್ನು ಕುರಿತು ಮ್ಯಾನೇಜ್‌ಮೆಂಟು ಸಂಘದೊಂದಿಗೆ ಮಾತುಕತೆ ನಡೆಸುವುದು, ಕೆ. ಎಸ್. ವಾಸನ್‌ರವರು ಮುಷ್ಕರ ಹಿಂತೆಗೆದುಕೊಳ್ಳುವಂತೆ ಸಲಹೆಯಿತ್ತು, ಉತ್ತಮ ವಾತಾವರಣ ಕಲ್ಪಿಸಲು ನೆರವು ನೀಡಬೇಕು. ಈ ಷರತ್ತುಗಳ ಮೇಲೆ ಶ್ರೀ ಕೆ. ಎಸ್. ವಾಸನ್‌ರವರು ಮುಷ್ಕರ ಹಿಂತೆಗೆದುಕೊಳ್ಳುವಂತೆ ಆದೇಶವಿತ್ತು ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಸಂಘಕ್ಕೆ ತಂತಿ ಕಳಿಸಿದ್ದಾರೆ.

…ಸಂಪಾದಕೀಯ…

ಪಾಕೀಸ್ತಾನದಲ್ಲಿ ಮಿಲಿಟರಿ ಸರ್ವಾಧಿಕಾರ

ಪಾಕೀಸ್ತಾನದಲ್ಲಿ ರಾಜ್ಯಾಂಗ ರದ್ದಾಗಿ ಪ್ರಾಂತ ಹಾಗೂ ಕೇಂದ್ರ ವಿಧಾನಮಂಡಲಗಳ ವಿಸರ್ಜನೆಯಾಗಿ, ದೇಶಾದ್ಯಂತವೂ ಮಾರ್ಷಲಾಜಾರಿ ತಂದು, ಮಿಲಿಟರಿ ಸರ್ವಾಧಿಕಾರಸ್ಥಾಪನೆಯಾಗಿದೆ. ರಾಜಕೀಯಪಕ್ಷಗಳೆಲ್ಲವನ್ನೂ ವಿಸರ್ಜಿಸಲಾಗಿದೆ. ಪಾಕೀಸ್ತಾನದಲ್ಲಿ ಸಂಭವಿಸಿರುವ ಈ ದುರ್ಘಟನೆಯು ಪಾಕೀಸ್ತಾನಕಷ್ಟೇ ಅಲ್ಲ, ಭಾರತಕ್ಕು ಮತ್ತು ಇಡೀ ಏಷ್ಯಾ ರಾಷ್ಟ್ರಗಳಿಗೂ ವಿಪತ್ಕಾರಿಯಾಗಿದೆ.

ಕಳೆದ ಒಂದು ವಾರದಲ್ಲಿ ಅಧ್ಯಕ್ಷ ಇಸ್ಕಂದರ್ ಮಿರ್ಜಾ ಮತ್ತು ಸೇನಾಧಿಕಾರಿ ಅಯೂಬ್‌ಖಾನ್‌ರವರ ನೇತೃತ್ವದಲ್ಲಿ ಸ್ಥಾಪಿತವಾಗಿರುವ ಮಿಲಿಟರಿ ಸರ್ವಾಧಿಕಾರಾಡಳಿತೆಯು ಅನೇಕ ಜನಪ್ರಿಯನಾಯಕರುಗಳನ್ನು ಬಂಧಿಸಿದೆ. ಪ್ರಜಾಪ್ರಭುತ್ವದ ಎಲ್ಲ ವಿಧಾನಗಳನ್ನು ಧ್ವಂಸಮಾಡಲಾಗಿದೆ. ಪ್ರಜಾಪ್ರಭುತ್ವರೀತಿಯಲ್ಲಿ ಜನಪ್ರಿಯ ಸರಕಾರದ ಸ್ಥಾಪನೆಯ ಮಾತು ಕನಸಾಗಿ ಪರಿಣಮಿಸಿದೆ.

ಮಿಲಿಟರಿ ಸರ್ವಾಧಿಕಾರಸ್ಥಾಪನೆಗೆ ಸಮರ್ಥನೆನೀಡುತ್ತ ಅವರು ಪಾಕೀಸ್ತಾನದಲ್ಲಿ ರಾಜಕಾರಣಿಗಳ ಸ್ವಾರ್ಥಪರತೆ ಮತ್ತು ಕಚ್ಚಾಟದಿಂದಾಗಿ, ಲಂಚಗುಳಿತನ ಮತ್ತು ಇತರ ದುಶ್ಚಟಗಳು ಬೆಳೆದು ರಾಷ್ಟ್ರವೇ ನಿರ್ನಾಮಗೊಳ್ಳುವ ಪರಿಸ್ಥಿತಿ ಉಂಟಾಗಿತ್ತೆಂದೂ, ಪರಿಸ್ಥಿತಿಯನ್ನು ಸುಧಾರಿಸಲು ಮಿಲಿಟರಿ ಸರ್ವಾಧಿಕಾರದ ಹೊರತು ಬೇರೇ ಮಾರ್ಗವೇ ಇರಲಿಲ್ಲವೆಂದು ಹೇಳಲಾಗಿದೆ. ಪಾಕೀಸ್ಥಾನವನ್ನು ಉಳಿಸಲು ಈ ಕ್ರಮ ತೆಗೆದುಕೊಂಡಿರುವುದಾಗಿ ತಿಳಿಸಲಾಗಿದೆ. ಇದರಿಂದಾಗಿ ಪಾಕೀಸ್ತಾನದಲ್ಲಿ ಪ್ರಜಾಪ್ರಭುತ್ವ ಆಡಳಿತೆಯ ಪ್ರಶ್ನೆ, ಸಾರ್ವತ್ರಿಕ ಚುನಾವಣೆಯ ಪ್ರಶ್ನೆ ಮೂಲೆಗೆ ಬಿದ್ದಂತಾಯಿತು.

ಮಿಲಿಟರಿ ಸರ್ವಾಧಿಕಾರದ ಸ್ಥಾಪನೆಯು ಪಾಕೀಸ್ತಾನದಲ್ಲಿ ಮಹಾ ಚುನಾವಣೆಗಳು ನಡೆಯಬೇಕೆಂದಿದ್ದ ಸಂದರ್ಭದಲ್ಲಿ ಬಂದಿರುವುದು ಗಮನಾರ್ಹವಾಗಿದೆ. ಪಾಕೀಸ್ತಾನದಲ್ಲಿನ ಎಲ್ಲ ರಾಜಕೀಯಪಕ್ಷಗಳೂ ಸಹ ಇತರ ವಿಷಯಗಳ ಬಗ್ಗೆ ಎಷ್ಟೇ ಭಿನ್ನಾಭಿಪ್ರಾಯವುಳ್ಳವಾಗಿದ್ದರೂ ಸಾರ್ವತ್ರಿಕಚುನಾವಣೆಗಳಬಗ್ಗೆ ಮಾತ್ರ ಒಮ್ಮತದ ಅಭಿಪ್ರಾಯಹೊಂದಿದ್ದುವು. ಮಹಾ ಚುನಾವಣೆಗಳು ನಡೆದಿದ್ದಲ್ಲಿ ಪಾಕೀಸ್ತಾನದಲ್ಲಿ ಪಾಳೆಯಗಾರೀ ಮತ್ತು ಸಾಮ್ರಾಜ್ಯವಾದೀ ಹಿಡಿತದ ಅಂತ್ಯ ಆರಂಭವಾಗುವ ಸಂಭವವಾದರೂ ಇರುತ್ತಿತ್ತೆಂದು ಹೇಳಬಹುದು.

ಆದರೆ ಸಾಮ್ರಾಜ್ಯಶಾಹಿ ಭಂಟರಾಗಿರುವ ಪ್ರತಿಗಾಮಿಶಕ್ತಿಗಳು ಚುನಾವಣೆಗಳನ್ನು ಹೇಗಾದರೂ ತಪ್ಪಿಸಲು ಹಂಚಿಕೆಹೂಡಿದ್ದು ಯಶಸ್ವಿಗೊಂಡಿತು. ಪಾಕೀಸ್ತಾನದಲ್ಲಿ ಕೆಲತಿಂಗಳುಗಳಿಂದ ನಡೆದ ಘಟನೆಗಳನ್ನು ಪರಿಶೀಲಿಸಿದಲ್ಲಿ ಈ ಅಂಶ ವ್ಯಕ್ತಗೊಳ್ಳುವುದು. ಪೂರ್ವಪಾಕೀಸ್ತಾನದಲ್ಲಿ ಅತಮಾರ್‌ರಹಮಾನ್ ಮಂತ್ರಿಮಂಡಲದ ಉಚ್ಚಾಟನೆ, ಶಾಸನ ಸಭೆಯಲ್ಲಿ ಉಪಸಭಾಪತಿಯ ಕೊಲೆ, ಒಂದು ಗುಂಪಿನ ಮೇಲೆ ಇನ್ನೊಂದನ್ನು ಎತ್ತಿಕಟ್ಟುವುದು ಇವೆಲ್ಲವೂ, ಮಿಲಿಟರಿ ಸರ್ವಾಧಿಕಾರದ ಸ್ಥಾಪನೆಗೆ ತಕ್ಕ ವಾತಾವರಣ ಉಂಟುಮಾಡಲು ಸಿದ್ಧವಾಗಿದ್ದವು.

ಮಿಲಿಟರಿ ಸರ್ವಾಧಿಕಾರಸ್ಥಾಪನೆಯು ಪಾಕೀಸ್ತಾನದಲ್ಲಿ ಪ್ರತಿಗಾಮಿಗಳ ಮತ್ತು ಅಮೇರಿಕನ್ ಸಾಮ್ರಾಜ್ಯವಾದಿಗಳ ಕುತಂತ್ರಕ್ಕೆ ದೊರೆತ ವಿಜಯವಾಗಿದೆ. ಮಧ್ಯಪ್ರಾಚ್ಯದಲ್ಲಿ ತೀವ್ರವಾದ ಸೋಲನ್ನಪ್ಪಿದ ಅಮೆರಿಕನ್ ಮತ್ತು ಬ್ರಿಟಿಷ್‌ಸಾಮ್ರಾಜ್ಯವಾದಿಗಳು ಮತ್ತೊಂದು ಏಷ್ಯಾರಾಷ್ಟ್ರದ ಸ್ವಾತಂತ್ರ್ಯವನ್ನು ತುಳಿಯಲು ಯತ್ನಿಸಿ, ಪಾಕೀಸ್ತಾನದಲ್ಲಿ ವಿಜಯಿಗಳಾಗಿದ್ದಾರೆ. ಬಾಗದಾದ್ ಕೂಟದಿಂದ ಇರಾಕ್ ಕಳಚಿಕೊಂಡಂದಿನಿಂದ ಅಮೆರಿಕನ್ ಸಾಮ್ರಾಜ್ಯಶಾಹಿಯು ತನ್ನ ಕೈಗೆಳಂಜಿರಾಷ್ಟ್ರಗಳಲ್ಲಿ ಮಿಲಿಟರಿಸರ್ವಾಧಿಕಾರವನ್ನು ಸ್ಥಾಪಿಸಲು ಯತ್ನಿಸುತ್ತಿದೆ. ಪಾಕೀಸ್ತಾನದಲ್ಲಿ ಅಧಿಕಾರವಹಿಸಿಕೊಂಡಿರುವ ಪಾಕಿಸ್ತಾನೀ ಸೇನೆಯು ಸಂಪೂರ್ಣವಾಗಿ ಅಮೆರಿಕನ್ ಸಾಮ್ರಾಜ್ಯವಾದಿಯ ನೇತೃತ್ವದಲ್ಲಿದೆಯೆಂದು ಮರೆಯುವಂತಿಲ್ಲ. ಇದರಿಂದಾಗಿ ಇಂದು ಪಾಕೀಸ್ತಾನವು ಸಂಪೂರ್ಣವಾಗಿ ಅಮೆರಿಕನ್ ಸಾಮ್ರಾಜ್ಯವಾದಿಯ ಅಡಿಯಾಳಾಗಿದೆ.

ಪಾಕೀಸ್ತಾನದ ಈ ಬೆಳವಣಿಗೆಗಳನ್ನು ಎಚ್ಚರದಿಂದ ಅವಲೋಕಿಸಬೇಕಿದೆ. ಪಾಕೀಸ್ತಾನವನ್ನು ಅಮೆರಿಕನ್ ಸಾಮ್ರಾಜ್ಯವಾದಿಯು ಏಷ್ಯದಲ್ಲಿ ತನ್ನ ಕುತಂತ್ರಗಳಿಗೆ ಇನ್ನಷ್ಟು ಹೆಚ್ಚು ಬಳಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ವೈದ್ಯಕೀಯ ಯೋಜನೆಗಳಿಗೆ ರಷ್ಯದ ಸಹಾಯ

ಭಾರತದಲ್ಲಿ ಔಷಧೀ ಉದ್ಯಮದ ಅಭಿವೃದ್ಧಿ ಬಗ್ಗೆ ಸೋವಿಯತ್ ರಷ್ಯದ ಔಷಧಿ ತಜ್ಞರ ತಂಡದ ನಾಯಕರಾದ ಎ. ಜಿ. ನತ್ರಾಜ್ ಅವರು ಭಾರತ ಸರ್ಕಾರದ ವಾಣಿಜ್ಯ ಮಂತ್ರಿಗಳಾದ ಶ್ರೀ ಮನೂಭಾಯಿ ಷಾ ಅವರಿಗೆ ತಮ್ಮ 2 ತಿಂಗಳ ಕಾರ್ಯದ ಬಳಿಕ ಒಪ್ಪಿಸಿದ್ದಾರೆ. ಈ ಔಷಧಿ ಯೋಯೋಜನೆಗಳ ಸ್ಥಾಪನೆಗೂ ಬೆಳವಣಿಗೆಗೂ ಸೋವಿಯತ್ ಸರಕಾರವು ಸಾಲವಾಗಿ 80 ಮಿಲಿಯ ರೂಬಲ್‌ಗಳನ್ನೂ ತಾಂತ್ರಿಕ ಸಹಾಯವನ್ನೂ ಕೊಡುವದಾಗಿ ಅವರು ಹೇಳಿದ್ದಾರೆ.

ಈಗ ಈ ಐದು ಯೋಜನೆಗಳು ಚರ್ಚೆಯಲ್ಲಿವೆ.

(1) ಸಂಯುಕ್ತ (ಔಷಧ)ಗಳು (2) ಭಾರತೀಯ ವನಸ್ಪತಿಗಳಿಂದ ಅಲ್ಕಾಲೈಡ್ ಔಷಧಿಗಳ ತಯಾರಿಕೆ, (3) ಶಸ್ತ್ರ ಚಿಕಿತ್ಸಾ ಸಲಕರಣೆಗಳ ತಯಾರಿಕೆ, (4) ಅಂಟಿಬಯೊಟಿಕ್ಸ್‌ಗಳ ತಯಾರಿಕೆ ಮತ್ತು (5) ಹಾರ್ಮೋನ್ಸ್ ತಯಾರಿಕೆ.

ಈ ಪರಿಣತರ ತಂಡವು ಭಾರತ ಸರ್ಕಾರದ ಆಮಂತ್ರಣದ ಮೇರೆಗೆ ಆಗಸ್ಟ್ ತಿಂಗಳ ಆರಂಭದಲ್ಲಿ ಬಂದಿತ್ತು. ಭಾರತದಲ್ಲಿ ವೈದ್ಯಕೀಯ ಹಾಗೂ ಔಷಧೀಯ ಅಭಿವೃದ್ಧಿಯ ಬಗ್ಗೆ ಸಲಹೆಗಳನ್ನು ಪಡೆಯುವುದೇ ಈ ಆಮಂತ್ರಣದ ಮುಖ್ಯ ಉದ್ದೇಶವಾಗಿತ್ತು.

ಸ್ಫುಟದರಲ್ಲಿಸುದ್ದಿ

…ಸಮಿತಿಯು ಕಳುಹಿಸುವುದು. ಸೋವಿಯತ್ ರಷ್ಯವು ಏಕಪಕ್ಷೀಯವಾಗಿ ಪ್ರಯೋಗಗಳನ್ನು ನಿಲ್ಲಿಸಿದ ಮಾದರೀ ಕ್ರಮವನ್ನು ಅಮೇರಿಕ, ಇಂಗ್ಲಂಡ್‌ಗಳು ಅನುಸರಿಸದೆ ಮತ್ತೆ ಅಮೇರಿಕ, ಇಂಗ್ಲಂಡ್, ರಷ್ಯಗಳು ಪ್ರಯೋಗಗಳನ್ನು ಆರಂಭಿದ ಬಗ್ಗೆ ಸಮಿತಿಯು ವಿಷಾದ ವ್ಯಕ್ತಪಡಿಸಿದೆ.

ಆತಿಚ್ಚನ್‌ರನ್ನು ಹೊರಹಾಕಿದರು !

ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾದ ಶ್ರೀ ಪಿ. ಸಿ. ಆತಿಚ್ಚನ್‌ರವರನ್ನು ಸಮಿತಿಯು ತಾತ್ಕಾಲಿಕವಾಗಿ ಹೊರಗೆಹಾಕಿದೆ. ಕಾರಣವೆಂದರೆ ಕೇರಳ ಕಾಂಗ್ರೆಸ್ಸಿನ ನಿಜಸ್ವರೂಪವನ್ನು ಕುರಿತ ಲೇಖನಗಳನ್ನು ಪತ್ರಿಕೆಗಳಿಗೆ ಬರೆದುದೇ ಆಗಿದೆ.

[ಇವರ ಲೇಖನವೊಂದನ್ನು 'ಜನಶಕ್ತಿ'ಯ ಆಗಸ್ಟ್ 15ರ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ಅದರಲ್ಲಿ ಅವರು ದುರ್ಮಾರ್ಗಿಯಾಗಿರುವ, ಜನರ ಹಿತಗಳನ್ನು ಅಲಕ್ಷಿಸಿರುವ ಕೇರಳ ಕಾಂಗ್ರೆಸ್ಸನ್ನು ಕುರಿತು ಕಟುವಾಗಿಯೇ ಬರೆದಿದ್ದರು.]

ಶ್ರೀ ಆತಿಚ್ಚನ್‌ರವರು ೩೩ ವರುಷಗಳಿಂದ ಕಾಂಗ್ರೆಸ್ಸಿನಲ್ಲಿರುವರಲ್ಲದೆ ಗಾಂಧೀಜಿಯವರ ಪರಮ ಶಿಷ್ಯರಾಗಿದ್ದರು. ಇವರು ಎಡಿಬಿಡದೆ 18 ವರುಷ ಶಾಸನ ಸಭಾ ಸದಸ್ಯರೂ ಆಗಿದ್ದರು. ಕುರುವರ್ ಮಹಾಸಭೆಯ ಅಧ್ಯಕ್ಷರೂ ಹೌದು. ಹಲವು ಮೂಲಭೂತವಾದ ಬದಲಾವಣೆಗಳನ್ನು ಅಪೇಕ್ಷಿಸಿ, ಮರ್ದಿತ ಕೆಳವರ್ಗದ ಜನರಿಗೆ ಒಳ್ಳೆಯ ಜೀವನವನ್ನು ಕಾಂಗ್ರೆಸ್ಸಿನ ಮೂಲಕ ಒದಗಿಸಿಕೊಡಬಹುದೆಂಬ ಭರವಸೆಯ ಮೇಲೆ ಕಾಂಗ್ರೆಸ್ಸನ್ನು ಸೇರಿದ್ದಾಗಿ ಅವರು ತಮ್ಮ ಲೇಖನಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಫೋಟೋಗಳನ್ನು ಕಿತ್ತುಕೊಂಡರು

ಇದೀಗ ದಂಡಿನಾಳ್ವಿಕೆಗೆ ಒಳಪಟ್ಟಿರುವ ಪಾಕಿಸ್ತಾನದ ಪೋಲೀಸರು ಬಲೂಚಿಸ್ತಾನದ ಗಾಂಧಿಯೆಂದು ಹೆಸರಾದ ಖಾನ್ ಅಬ್ದುಸ್ ಸಮ್ಮದ್ ಖಾನ್ ಅವರ ಸೋದರ ಅಬ್ದುಸ್ ಸಲಾವರ್ ಅಚಕ್ ಝಾಯಿ ಅವರ ಕ್ವೆಟ್ಟಾದ ಮನೆಗೆ ನುಗ್ಗಿ ಗಾಂಧಿ ಮತ್ತು ನೆಹ್ರೂ ಫೋಟೋಗಳನ್ನು ಕಿತ್ತುಕೊಂಡರು.

ಅದಲ್ಲದೆ "608 ಕಬ್ಬಿಣದ ಶಿರಸ್ತ್ರಾಣಗಳನ್ನೂ ಕಮ್ಯೂನಿಸ್ಟ್, ಭಾರತೀಯ ಹಾಗೂ ಪಖ್ತೂನಿಸ್ತಾನದ ಸಾಹಿತ್ಯಗಳನ್ನೂ ಶ್ರೀ ಕೃಷ್ಣನ ಪುತ್ಥಳಿಯನ್ನೂ ಹಳ್ಳಿಗಾಡಿನಲ್ಲಿ ತಯಾರಾದ ಒಂದು ಖಡ್ಗವನ್ನೂ ವಶಪಡಿಸಿಕೊಂಡರು" ಎಂದು ಪಾಕಿಸ್ತಾನದ ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ.

ನ್ಯೂಕ್ಲಿಯರ್ ನಿಷೇಧ ದಿನಾಚರಣೆ !

ಅಖಿಲ ಭಾರತ ಶಾಂತಿ ಸಮಿತಿಯು ನವೆಂಬರ್ 1ನೆಯ ತಾರೀಕನ್ನು ನ್ಯೂಕ್ಲಿಯರ್ ನಿಷೇಧ ದಿನಾಚರಣೆಯನ್ನಾಗಿ ಆಚರಿಸಬೇಕೆಂದು ತನ್ನೆಲ್ಲ ಶಾಖಾ ಸಮಿತಿಗಳಿಗೂ ಮನವಿ ಮಾಡಿಕೊಂಡಿದೆ. ಅಂದು ಸಭೆ ಸಮ್ಮೇಲನಗಳನ್ನು ನಡೆಸಿ, ಪ್ರಕಟಣೆಗಳನ್ನು ಹೊರಡಿಸಿ ನ್ಯೂಕ್ಲಿಯರ್ ಪ್ರಯೋಗಗಳ ಅತ್ಯಂತ ಅಪಾಯಕಾರಿ ಪರಿಣಾಮಗಳನ್ನು ಜನತೆಗೆ ತಿಳುಹಿಸಬೇಕೆಂದು ಕೋರಿದೆ.

ಜಪಾನಿನ ಅಣು ಹಾಗೂ ಜಲಜನಕ ಬಾಂಬು ನಿಷೇಧ ಸಮಿತಿಯ ಕರೆಯನ್ನು ಮನ್ನಿಸಿ "ಅಕ್ಟೋಬರ್ 15ರಿಂದ ನವಂಬರ್ 15ರ ವರೆಗೆ ಅಂತರ್ರಾಷ್ಟ್ರೀಯ ಸಾಮೂಹಿಕ ಕ್ರಿಯಾಚರಣೆಯ ಮಾಸವನ್ನಾಗಿ ಆಚರಿಸಬೇಕು" ಎಂದೂ ತಿಳುಹಿಸಿದೆ.

ನವೆಂಬರ್ ೧ರಂದು ಅಮೇರಿಕಾ, ಇಂಗ್ಲಂಡ್ ಮತ್ತು ರಷ್ಯಾ ಇವುಗಳ ರಾಯಭಾರಿ ಕಛೇರಿಗಳಿಗೆ ನ್ಯೂಕ್ಲಿಯರ್ ಪ್ರಯೋಗಗಳ ನಿಷೇಧ ಪತ್ರಗಳನ್ನು ಶಾಂತಿ…

ಮ್ಯಾನೇಜ್‌ಮೆಂಟಿನಲ್ಲಿ ಕಾರ್ಮಿಕರ ಭಾಗ

ಭಾರತದ ಔದ್ಯಮಿಕ ರಂಗದಲ್ಲೇ ಪ್ರಪ್ರಥಮವಾಗಿ ಸಂಕೇತಪೂರ್ಣವಾದ ಬೆಳವಣಿಗೆಯೊಂದು ಕೇರಳದಲ್ಲಿ ಆರಂಭವಾಗಿದೆ. ಕೇರಳ ಸರ್ಕಾರದ ಒಡೆತನದಲ್ಲಿರುವ ತ್ರಿಚೂರಿನ ಸೀತಾರಾಮ್ ಬಟ್ಟೆ ಗಿರಣಿಯ ವ್ಯವಸ್ಥಾಪಕ ಮಂಡಳಿಯ ಪುನರ್ರಚನೆ ಮಾಡಿ ಕಾರ್ಮಿಕರಿಗೂ ಪ್ರಾತಿನಿಧ್ಯ ನೀಡಲಾಗಿದೆ. ಔದ್ಯೋಗಿಕ ಕ್ಷೇತ್ರದಲ್ಲಿ ಇಂಥ ಕ್ರಮವನ್ನು ಕೈಕೊಂಡ ಪ್ರಥಮ ರಾಜ್ಯವೆಂದರೆ ಕೇರಳವೇ.

(೯ನೇ ಪುಟ ನೋಡಿ)

ಕೇರಳದ ಬಗ್ಗೆ ಕಾಂಗ್ರೆಸ್ ಮತ್ತು ಕೇಂದ್ರ ಸರಕಾರದ

ಮದರಾಸಿನಲ್ಲಿ ಸಮಾವೇಶಗೊಂಡಿರುವ ಭಾರತ ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಲಿಯ ಸಭೆಯು ಕೇರಳದ ಪರಿಸ್ಥಿತಿಯನ್ನು ಕುರಿತು ಚರ್ಚೆ ನಡೆಸಿದ ನಂತರ ಈ ಕೆಳಕಂಡ ನಿರ್ಣಯವನ್ನು ಅನುಮೋದಿಸಿವೆ.

ಕೇರಳದಲ್ಲಿ ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಮಂತ್ರಿಮಂಡಲದ ವಿರುದ್ಧ ಕಾಂಗ್ರೆಸ್ಸಿನ ತಂತ್ರಗಳು ಮತ್ತು ಅನುಸರಿಸುತ್ತಿರುವ ಕ್ರಮಗಳನ್ನೂ ರಾಷ್ಟ್ರೀಯ ಮಂಡಲಿಯು ಪರಿಶೀಲಿಸಿದೆ. ಅವು ಸಾರ್ವಜನಿಕ ಜೀವನದ ಎಲ್ಲ ಸಾಮಾನ್ಯ ರೂಪಗಳಿಗೂ ಮತ್ತು ಭಾರತದಲ್ಲಿ ಪ್ರಜಾಪ್ರಭುತ್ವದ ಭವಿತವ್ಯಕ್ಕೂ ಸವಾಲಿನಂತಿದೆ.

ಕೇರಳದಲ್ಲಿ ಪ್ರಸಕ್ತ ಮಂತ್ರಿಮಂಡಲವು ಅಧಿಕಾರ ವಹಿಸಿಕೊಂಡಂದಿನಿಂದ ಈ ಕಳೆದ 18 ತಿಂಗಳುಗಳಲ್ಲಿ, ಕಾಂಗ್ರೆಸ್ಸ್ ಮತ್ತು ಅವರ ಬೆಂಬಲಿಗರು ಕೇಂದ್ರ ಸರಕಾರದ ಹಸ್ತಪ್ರವೇಶದ ದೃಷ್ಟಿಯಿಂದ ಸರ್ಕಾರದ ವಿರುದ್ಧ ಅಪಪ್ರಚಾರ, ಪ್ರಚೋದನೆ ಮತ್ತು ಹಿಂಸಾತ್ಮಕ ಕೃತ್ಯಗಳಲ್ಲಿ ಕ್ರಮವಾಗಿ ತೊಡಗಿವೆ. ರಾಜ್ಯದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆಯ ಹಿಂಬದಿಯಲ್ಲಿ ಮತ್ತೆ ಕಾಂಗ್ರೆಸ್ ಆಡಳಿತೆ ತರಲು ಯತ್ನಿಸಲಾಗಿದೆ. ಆದರೆ ಈ ತಂತ್ರವೆಲ್ಲವೂ ಅವರನ್ನು ಜನತೆಯಿಂದ ಮತ್ತಷ್ಟು ದೂರ ಮಾಡಿದೆ. ದೇವೀಕುಲಂ ಉಪ ಚುನಾವಣೆಯು ಇದನ್ನು ಸ್ಪಷ್ಟಗೊಳಿಸಿದೆ.

ಈ ವರೆಗೆ ಇಂಥ ಚಟುವಟಿಕೆಗಳಿಗೆ ಪರೋಕ್ಷವಾಗಿ ಪ್ರೋತ್ಸಾಹ ನೀಡುತ್ತಿದ್ದ ಕೇಂದ್ರ ಸರಕಾರ ಮತ್ತು ಕಾಂಗ್ರೆಸ್ ಹೈಕಮಾಂಡು ಈಗ ಬಹಿರಂಗವಾಗಿ ಪ್ರೋತ್ಸಾಹ ನೀಡುತ್ತಿದೆ. ಕಾಂಗ್ರೆಸ್ ಅಧ್ಯಕ್ಷ ಶ್ರೀ ಧೇಬರ್ ಮತ್ತು ಪ್ರಧಾನ ಮಂತ್ರಿಗಳು ಮತ್ತು ಇತರ ಕೇಂದ್ರ ಸಚಿವರುಗಳು ಭಾಗವಹಿಸಿದ್ದ ಈ ಕಾರ್ಯಕಾರಿ ಸಮಿತಿಯ ನಿರ್ಣಯವು, ಕಾರ್ಮಿಕವರ್ಗ, ರೈತರು ಮತ್ತು ಇತರ ದುಡಿಯುವ ಜನವಿಭಾಗಗಳನ್ನು ಪ್ರತಿನಿಧಿಸುವ ಪಕ್ಷದ ನೇತೃತ್ವದಲ್ಲಿರುವ ರಾಜ್ಯ ಸರಕಾರವನ್ನು, ಭಾರತದಲ್ಲಿ ಆಳುವ ಪಕ್ಷವಾಗಿರುವ ಕಾಂಗ್ರೆಸು ನಾಯಕತ್ವವು ಸಹಿಸದೆ ಎಷ್ಟು ದೂರದ ವರೆಗೆ ಹೋಗಿದೆ ಎಂಬುದನ್ನು ಸೂಚಿಸುತ್ತದೆ. ತಮ್ಮ ಅಧಿಕಾರದ ಗುತ್ತೇದಾರೀ ಮತ್ತು ಬೇರೂರಿದ ಹಿತಸಾಧನೆಗಳಿಗೆ ಧಕ್ಕೆ ಬಂದಾಗ ಕಾಂಗ್ರೆಸ್ ಹೈಕಮಾಂಡು ಸಂವಿ

ಭಾರತ ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಲಿಯ ಗೊತ್ತುವಳಿ

ಧಾನದ ಪಾವಿತ್ರ್ಯ ಮತ್ತು ಪ್ರಜಾಪ್ರಭುತ್ವ ರೂಪಗಳನ್ನು ತೃಣೀಕರಿಸುವುದೆಂಬುದನ್ನು ಇದು ತೋರಿಸುತ್ತದೆ.

ಕೇಂದ್ರ ಸರಕಾರವು ಕೇರಳ ಸರಕಾರದೊಂದಿಗೆ ತನ್ನ ಸಂಬಂಧದಲ್ಲಿ ಯಾವ ರೀತಿ ಭೇದವೆಣಿಸುತ್ತಿದೆ ಎಂಬಂಶವನ್ನು ದೇಶದ ಜನತೆಯ ಮುಂದೆ ತರುವುದಗತ್ಯವೆಂದು ರಾಷ್ಟ್ರೀಯ ಮಂಡಲಿಯು ಭಾವಿಸುತ್ತದೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವೆ ವ್ಯವಹಾರವನ್ನು ಸಾಮಾನ್ಯವಾಗಿ ರಹಸ್ಯವಾದುದೆಂದು ಪರಿಗಣಿಸಲಾಗುತ್ತದೆ ಮತ್ತು ಅಂಥ ರಹಸ್ಯ ವ್ಯವಹಾರಗಳು ನಿ

ಶೇಕಡ 50ರಷ್ಟು ಆಹಾರ ಧಾನ್ಯಗಳ ಅಗತ್ಯತೆಯಲ್ಲಿ ಖೋತಾ ಪ್ರದೇಶವಾಗಿರುವಾಗ ಇದು ವಿಸ್ಮಯಕಾರಕವಾಗಿದೆ. ರಾಜ್ಯದ ಸ್ವಾಭಾವಿಕ ಪರಿಸ್ಥಿತಿಯಿಂದಾಗಿ ಆಹಾರ ಉತ್ಪಾದನೆಯು ಸೀಮಿತಗೊಂಡಿದೆ. ಆದರೆ ಕೇರಳವು ದೇಶಕ್ಕೆ ಅಗತ್ಯವಿರುವ ವಿದೇಶೀ ವಿನಿಮಯವನ್ನು ದೊರಕಿಸುವ ಬೆಳೆಗಳನ್ನು ಬೆಳೆಯುತ್ತದೆ. ಆದ್ದರಿಂದಾಗಿ ಕೇರಳ ಆಹಾರ ಧಾನ್ಯಗಳ ಬೇಡಿಕೆಯನ್ನು ಪೂರೈಸುವುದರಲ್ಲಿ ಕೇಂದ್ರ ಸರಕಾರದ ಜವಾಬುದಾರಿ ಹೆಚ್ಚಿನದಿದೆ.

ಕಾಂಗ್ರೆಸ್ ಪಕ್ಷದ ನಾಯಕರುಗಳು ಮತ್ತು ಕೇಂದ್ರ ಸರಕಾರದ ಹೇಳಿಕೆಗಳು ಮತ್ತು ಚಟುವಟಿಕೆಯು ರಾಜ್ಯ ಸರಕಾರದ ವಿರುದ್ಧ ಕೇರಳದ ಅಧಿಕಾರಿಗಳನ್ನು ಪ್ರಚೋದಿಸುವ ಅಥವ ಅವರಲ್ಲಿ ಆಲಸ್ಯವನ್ನು ಮಾಡುವ ರೀತಿಯದ್ದಾಗಿರುವುದರಿಂದ ಸಂವಿಧಾನ ಹಾಗೂ ಪ್ರಜಾಪ್ರಭುತ್ವಕ್ಕೆ ದೊಡ್ಡ ಅಪಾಯವೊದಗುತ್ತಿದೆ.

ಈ ಒಂದು ಚಳವಳಿಯು ಕೇರಳ ಸರಕಾರದ ವಿರುದ್ಧ ಮಾತ್ರವೇ ಅಲ್ಲದೆ, ದೇಶದ ಇಡೀ ಪ್ರಜಾಪ್ರಭುತ್ವ ಚಳವಳಿಯ ವಿರುದ್ಧವಾಗಿಯೂ ಇದೆ ಎಂದು ರಾಷ್ಟ್ರೀಯ ಮಂಡಲಿಯು ತಿಳಿಸಬಯಸುತ್ತದೆ. ಕೇರಳ ಸರಕಾರವು ಉತ್ತಮ ಜೀವನಕ್ಕಾಗಿ ಮತ್ತು ಪ್ರಜಾಪ್ರಭುತ್ವಕ್ಕಾಗಿ ನಮ್ಮ ಜನ

ಲವು ನಾಯಕರುಗಳು ಸ್ವಲ್ಪವೂ ನಾಚಿಕೆಯಿಲ್ಲದೆ ಕೇಂದ್ರಸರಕಾರದ ಪ್ರವೇಶವನ್ನು ಕೇಳುತ್ತಿದ್ದಾರೆ. ಈರೀತಿಯಲ್ಲಿ ಪ್ರಜಾ ಸೋಷಿಲಿಸ್ಟ್ ನಾಯಕರುಗಳು ಕಾರ್ಮಿಕವರ್ಗ ಮತ್ತು ಪ್ರಜಾಪ್ರಭುತ್ವ ಚಳವಳಿಗೆ ದ್ರೋಹ ಬಗೆಯುವುದರಲ್ಲಿ ತಮ್ಮ ಪ್ರತಾಪ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಕೇರಳದಲ್ಲಿ ಅವರಪಾತ್ರವು ಪ್ರತಿಗಾಮಿಶಕ್ತಿಗಳಿಗೆ ಬೆಂಬಲ ನೀಡುವುದಾಗಿದೆ.

ಕಾಂಗ್ರೆಸ್, ಪ್ರಜಾಸೋಷಿಲಿಸ್ಟ್ ಪಕ್ಷ ಮತ್ತು ಬೇರೂರಿರುವ ಸ್ವಹಿತಸಾಧಕರ ಪ್ರಯತ್ನಗಳನ್ನು ಮುರಿಯಲು ಕೇರಳ ಸರಕಾರದ ರಕ್ಷಣೆಗಾಗಿ ದೇಶಾದ್ಯಂತ ನಮ್ಮ ಜನತೆಯು ಅಣಿನೆರೆದಿದೆ ಎಂಬುದನ್ನು ರಾಷ್ಟ್ರೀಯ ಮಂಡಲಿಯು ಹೆಮ್ಮೆಯಿಂದ ಗಮನಿಸುತ್ತದೆ. ಆದರೂ, ಕೇಂದ್ರಸರಕಾರದ ಪ್ರವೇಶದ ಅಪಾಯವು ಇನ್ನೂ ಹೋಗಿಲ್ಲ ಎಂಬಂಶವನ್ನು ರಾಷ್ಟ್ರೀಯಮಂಡಲಿಯು ತಿಳಿಸಬಯಸುತ್ತದೆ. ಕೇರಳಸರಕಾರದ ಗೌರವ ಮತ್ತು ಅಂತಸ್ತು ದಿನೇದಿನೇ ವರ್ಧಿಸುತ್ತಿದೆ ಎಂಬುದು ಕಾಂಗ್ರೆಸ್ಸ್‌ನಾಯಕರಿಗೆ ತಿಳಿದಿದೆ. ಚುನಾವಣೆಯ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆಬರುವ ಸಂಭವ ಕ್ಷೀಣಿಸುತ್ತಿದೆ. ಕಾಂಗ್ರೆಸ್ ಸರಕಾರಗಳು ಇತರರಾಜ್ಯಗಳಲ್ಲಿ ಹೆಚ್ಚುಹೆಚ್ಚು ಅಪ್ರಿಯಗೊಳ್ಳುತ್ತಿರುವುದರಿಂದಾಗಿ ಕೇರಳಸರಕಾರದ ವಿಜಯಗಳು ಮತ್ತು ಸಾಧನೆಗಳು ಅವರಲ್ಲಿ ಭೀತಿ ಉಂಟುಮಾಡಿದೆ. ಅವರಿಗಿರುವ ಒಂದೇ ಆಶೆಯೆಂದರೆ ಜನಪ್ರಿಯ ಕೇರಳಸರಕಾರದ ಸ್ಥಾನದಲ್ಲಿ ರಾಷ್ಟ್ರಾಧ್ಯಕ್ಷರ ಆಳ್ವಿಕೆಗೆ ತಕ್ಕ ವಾತಾವರಣ ಕಲ್ಪಿಸುವುದಾಗಿದೆ. ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಕೇರಳಸರಕಾರದ ವಿರುದ್ಧ ಕಾಂಗ್ರೆ

ಧೋರಣೆ ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುವಂಥದ್ದಾಗಿದೆ

ಇತರ ಕಾಂಗ್ರೆಸ್ ನಾಯಕರುಗಳು ಮಾಡಿರುವ ಬೇಜವಾಬ್ದಾರಿಯುತ ಮತ್ತು ಪ್ರಚೋದಕರ ಹೇಳಿಕೆಗಳೇ ಅಲ್ಲದೆ, ಪ್ರಧಾನ ಮಂತ್ರಿಯವರೂ ಸಹ ಬಹಿರಂಗವಾಗಿ ಪತ್ರಿಕಾ ಸಮ್ಮೇಳನದಲ್ಲಿ, ಅದೂ ಸಹ ಏಕಪಕ್ಷೀಯವಾದ ಅಪಾದನೆಗಳ ಆಧಾರದ ಮೇಲೆ ರಾಜ್ಯ ಸರಕಾರವನ್ನು ಖಂಡಿಸಿದ್ದಾರೆ. ಪ್ರಧಾನ ಮಂತ್ರಿಗಳ ಈ ದುರದೃಷ್ಟಕರವಾದ ಪತ್ರಿಕಾ ಸಮ್ಮೇಳನವು ಹಿಂಸಾತ್ಮಕ ಕೃತ್ಯಗಳನ್ನು ನಡೆಸುತ್ತಿರುವವರಿಗೆ ಪ್ರೋತ್ಸಾಹ ದೊರೆತಂತಾಗಿ ಯಾವ ರೀತಿಯಲ್ಲಿ ಪರಿಸ್ಥಿತಿಯನ್ನು ತೀವ್ರಗೊಳಿಸಿತು ಮತ್ತು ಕೇಂದ್ರದ ಪ್ರವೇಶದ ಆಶೆಯನ್ನು ಹೇಗೆ ಹೆಚ್ಚಿಸಿತು ಎಂಬುದು ಎಲ್ಲರಿಗೂ ತಿಳಿದಿದೆ.

ಸತ್ಯಾಂಶಗಳನ್ನು ತೃಣೀಕರಿಸಿ, ಕೇರಳ ಕಾಂಗ್ರೆಸ್ ನಾಯಕರ ಹಿಂಸಾತ್ಮಕ ಕೃತ್ಯಗಳು ಮತ್ತು ದುಷ್ಪ್ರಚಾರದ ಚಳವಳಿಯನ್ನು ಗಮನಕ್ಕೆ ತೆಗೆದುಕೊಳ್ಳದೆ, ಇವುಗಳಿಗೆ ಉತ್ತೇಜನ ಕೊಡುವ ರೀತಿಯಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಒಂದು ನಿರ್ಣಯವನ್ನು ಅನುಮೋದಿಸಿದೆ.

ಯಮಬದ್ಧವಾಗಿ ವಿಶೇಷಾಧಿಕಾರವೆಂದು ಗಣಿಸಲಾಗಿದೆ. ಆದರೂ ಸಹ, ಇತ್ತೀಚಿಗೆ ಕೇರಳ ಮುಖ್ಯ ಮಂತ್ರಿಗಳು ಕೇಂದ್ರ ಸರಕಾರಕ್ಕೆ ರಹಸ್ಯವೆಂದು ತಿಳಿಸಿ ಕಳಿಸಲಾಗಿದ್ದ ವ್ಯವಹಾರದ ಬಗ್ಗೆ ಕೇಂದ್ರ ಗೃಹ ಸಚಿವರು ಈ ವಿಶೇಷಾಧಿಕಾರವನ್ನು ಬಳಸಲಿಲ್ಲ ಎಂಬುದು ಎಲ್ಲರಿಗೂ ತಿಳಿದಿದೆ. ಕಾಂಗ್ರೆಸ್ ಆಡಳಿತೆಯ ಈ ಹನ್ನೊಂದು ವರ್ಷಗಳಲ್ಲಿ ಕೇಂದ್ರ ಸರಕಾರವು ರಾಜ್ಯ ಸರಕಾರಕ್ಕೆ ಸಂಬಂಧಿಸಿ ಯಾವ ಸಂದರ್ಭದಲ್ಲೂ ಈ ರೀತಿ ವರ್ತಿಸಿಲ್ಲ. ಅನೇಕ ಬಾರಿ ವಿರೋಧ ಪಕ್ಷಗಳವರು ಪಾರ್ಲಿಮೆಂಟಿನಲ್ಲಿ ರಾಜ್ಯ ಸರಕಾರದ ವ್ಯವಹಾರವನ್ನು ಮಂಡಿಸಬೇಕೆಂದು ಒತ್ತಾಯಪಡಿಸಿದ್ದರೂ ಸಹ ಹಾಗೆ ಮಾಡಿದ್ದಿಲ್ಲ.

ಕೇಂದ್ರ ಸರಕಾರವು ಕೇರಳದ ಬಗ್ಗೆ ಭೇದಭಾವವನ್ನು ಅನೇಕ ವಿಷಯಗಳಲ್ಲಿ ಅನುಸರಿಸುತ್ತಿದೆ. ಕೇರಳ ಸರಕಾರಕ್ಕೆ ಕೇಂದ್ರದಿಂದ ಕನಿಷ್ಠವಾಗಿ ಅಗತ್ಯವಿರುವ ಆಹಾರ-ಧಾನ್ಯಗಳನ್ನೂ ಸಹ ಒದಗಿಸಲು ನಿರಾಕರಿಸಿರುವುದು ಗಮನಾರ್ಹವಾದುದಾಗಿದೆ. ಕೇರಳವು ಸಾಮಾನ್ಯವಾಗಿ

ತೆಯು ನಡೆಸುತ್ತಿರುವ ಹೋರಾಟಗಳ ಐತಿಹಾಸಿಕ ವಿಜಯವನ್ನು ಪ್ರತಿನಿಧಿಸುತ್ತದೆ. ಹದಿನೆಂಟು ತಿಂಗಳು ಅಲ್ಪಕಾಲದಲ್ಲಿ ಕೇರಳ ಸರಕಾರದ ಕ್ರಮಗಳು ಮತ್ತು ಕಾರ್ಯವು ಕೇರಳದ ಶೋಷಿತ ಜನಸಮೂಹಕ್ಕೆ ಪರಿಹಾರವನ್ನು ತಂದಿರುವುದೇ ಅಲ್ಲದೆ, ದೇಶಾದ್ಯಂತ ಹೋರಾಡುತ್ತಿರುವ ಜನಸಮೂಹಗಳಿಗೆ ಅವರ ಭವಿಷ್ಯದ ಬಗ್ಗೆ ವಿಶ್ವಾಸವನ್ನಿತ್ತಿದೆ. ಕಾಂಗ್ರೆಸ್ ಸರಕಾರಗಳು ತಮ್ಮ ನೀತಿಗಳಿಂದಾಗಿ ತೀವ್ರ ಬಿಕ್ಕಟ್ಟಿನಲ್ಲಿವೆ ಮತ್ತು ಅವುಗಳ ವಿರುದ್ಧ ಜನತೆಯ ಅತೃಪ್ತಿಯು ದಿನೇದಿನೇ ಬೆಳೆಯುತ್ತಿದೆ.

"ಪ್ರಜಾಪ್ರಭುತ್ವವಾದಿ ಸಮಾಜವಾದಿ"ಗಳೆಂದು ಕರೆದುಕೊಳ್ಳುವ ಪ್ರಜಾ ಸೋಷಿಲಿಸ್ಟ್‌ಪಕ್ಷದ ನಾಯಕರುಗಳು ಸಂಪೂರ್ಣವಾಗಿ ಕಾಂಗ್ರೆಸ್ ಮತ್ತು ಸ್ವಹಿತ ಸಾಧಕರೊಂದಿಗೆ ಕೂಡಿಕೊಂಡಿರುವುದು ಮತ್ತು ಅವರೊಂದಿಗೆ ಕೇರಳ ಸರಕಾರದ ಮೇಲೆ ಯಾವ ವಿವೇಚನೆಯು ಇಲ್ಲದೆ ಆರೋಪಹೊರಿಸಿ ಧಾಳಿ ನಡೆಸುತ್ತಿರುವುದೂ ಶೋಚನೀಯವಾಗಿದೆ. ಅವರ ಕೆ

ಸ್ ಮತ್ತು ಪ್ರಜಾಸೋಷಿಲಿಸ್ಟ್ ಪಕ್ಷಗಳು ಅನುಸರಿಸುತ್ತಿರುವ ಧೋರಣೆಯು ಅವರ ರಾಜಕೀಯ ದಿವಾಳಿಖೋರತನ ಮತ್ತು ಅಸಹಾಯಕತೆಯ ಪ್ರದರ್ಶನವಾಗಿದೆ.

ಕೇರಳದಲ್ಲಿ ಕಾಂಗ್ರೆಸ್ ಮತ್ತು ಪ್ರಜಾಸೋಷಿಲಿಸ್ಟ್ ಪಕ್ಷಗಳ ಕುತಂತ್ರ ಮತ್ತು ಚಳುವಳಿಯನ್ನು ಹತ್ತಿಕ್ಕಲು ಎಲ್ಲ ನ್ಯಾಯವಾದೀ ಜನರೂ ಇನ್ನಷ್ಟು ಹೆಚ್ಚು ಜಾಗೃತರಾಗಿರಬೇಕೆಂದು ಮತ್ತು ಇನ್ನೂ ಹೆಚ್ಚು ಕ್ರಿಯಾಶೀಲತೆಯನ್ನು ಪ್ರದರ್ಶಿಸಬೇಕೆಂದೂ ರಾಷ್ಟ್ರೀಯಮಂಡಲಿಯು ವಿನಂತಿಸುತ್ತದೆ. ದೇಶಾದ್ಯಂತ ಅಂಥ ಕ್ರಿಯಾಶೀಲತೆ ಮತ್ತು ಬೆಂಬಲದಿಂದ ಹಾಗೂ ಕೇರಳದ ಜನತೆಯ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಕೇರಳಸರಕಾರವು ಸತತವಾಗಿ ಯತ್ನಿಸುವುದರಿಂದ ಮಾತ್ರವೇ ಕಾಂಗ್ರೆಸ್ ಮತ್ತು ಸ್ವಹಿತಸಾಧಕರ ಯತ್ನಗಳನ್ನು ಮುರಿಯಲು ಸಾಧ್ಯ. ಕೇರಳದಲ್ಲಿ ಆಪತ್ತಿಗೀಡಾಗಿರುವುದು ಕಾಂಗ್ರೆಸ್ಸೇತರ ಸರಕಾರವು ಅಸ್ತಿತ್ವದಲ್ಲಿರುವುದು ಮತ್ತು ಕೆಲಸಮಾಡುವುದು ಅಷ್ಟೇ ಆಗಿಲ್ಲ.

(೬ನೇ ಪುಟ ನೋಡಿ)

ತಾಷ್ಕೆಂಟಿನಲ್ಲಿ ನಾವು ಕಳೆದ

ಮಹದಾನಂದದ ಬೆಳಗು—ಸಂತಸದ ಸಂಜೆ

[ಪಂಜಾಬ ಶಾಂತಿ ಸಭೆಯ ಪ್ರಧಾನ ಕಾರ್ಯದರ್ಶಿಗಳಾದ ಜಗಜೀತ್ ಸಿಂಗ್ ಆನಂದರು ಇತ್ತೀಚೆಗೆ ಜುಲೈ ತಿಂಗಳಲ್ಲಿ ರಷಿಯಾಕ್ಕೆ ಹೋದಾಗ ತಮ್ಮ ಅನುಭವಕ್ಕೆ ಬಂದ, ಎಂದೂ ಮರೆಯಲಾಗದ ಹಲವು ಘಟನೆಗನ್ನು ಹೃದಯಂಗಮವಾಗಿ ಇಲ್ಲಿ ವಿವರಿಸಿದ್ದಾರೆ.

ಸ್ಟಾಕ್‌ಹೋಮ್‌ನಲ್ಲಿ ಜರುಗಲಿರುವ ನಿಶ್ಶಸ್ತ್ರೀಕರಣ ಹಾಗೂ ಅಂತರ್‍ರಾಷ್ಟ್ರೀಯ ಸಹಕಾರ ಅಧಿವೇಶನಕ್ಕೆ ಭಾರತದಿಂದ ಪ್ರತಿನಿಧಿಯಾಗಿ ಹೊರಟ ನಾನು ತಾಷ್ಕೆಂಟಿನಲ್ಲಿ ಇತರ ಪ್ರತಿನಿಧಿಗಳೊಂದಿಗೆ ಇಳಿದೆ. ಸ್ಟಾಕ್‌ಹೋಮಿಗೆ ಹೋಗುತ್ತಿರುವ ನನ್ನ ಪಯಣದ ಪ್ರಥಮ ವಿಹಾರ ಸ್ಥಳ—ತಾಷ್ಕೆಂಟ್. ಊಟವಾದ ನಂತರ ನಾನು ತಾಷ್ಕೆಂಟ್ ನಗರವನ್ನು ನೋಡಲಿಚ್ಛಿಸಿ ನನ್ನ ಆತ್ಮೀಯರಾದ ಈರ್ವರು ಪ್ರತಿನಿಧಿಗಳ ಸಮ್ಮತಿ ಕೇಳಿದೆ. ಅವರಿಗೂ ನಗರವನ್ನು ನೋಡುವ ಕುತೂಹಲ ಕೆರಳಿತು. ನಾವು ಮೂವರೂ ನಮ್ಮ ಖರ್ಚಿನಿಂದ ತಾಷ್ಕೆಂಟ ನಗರ ಸಂಚಾರಕ್ಕೆ ಹೊರಟೆವು. ಆ ಸಂಜೆಯು ನಮಗೆಲ್ಲ ಸಂತಸದ ಸಂಜೆ. ನಗರವನ್ನು ಸುತ್ತಿ ಸುತ್ತಿ ಕೊನೆಗೆ ನಯನ ಮನೋಹರವಾದ ಒಂದು ಗಾರ್ಡನ್ನಿಗೆ ಬಂದೆವು. ವನಸಿರಿಯ ಮಧ್ಯೆ ಉನ್ನತವಾದ, ಸುಂದರವಾದ ಕಟ್ಟಡವು ರಾರಾಜಿಸುತ್ತಿತ್ತು. ಅದರ ಹೆಸರು 'ಅಲಿಷರ್ ನೋವ್ವಿ' ಎಂದು. ಅದೊಂದು ಸಿನಿಮಾ ಮಂದಿರ. ಅಲಿಷರ್ ನೋವ್ವಿ ಒಬ್ಬ ರಷಿಯನ್ ಮಹಾಕವಿ. ಅವನ ಸ್ಮಾರಕವಾಗಿ ಆ ಹೆಸರಿಟ್ಟಿದ್ದಾರೆಂದು ವಿಚಾರ ಮಾಡಲಾಗಿ ನನಗೆ ತಿಳಿದುಬಂತು.

ನಾನೊಬ್ಬ ಭಾರತೀಯ, ಆದರೂ ಸೀಖ್ ಪಂಥದವನಾದ್ದರಿಂದ ನಾನು ತಲೆಗೆ ಸುತ್ತಿಕೊಂಡಿರುವ 'ಪಗಡಿ', ಕೆನ್ನೆಗೆ ಅಂಟಿಕೊಂಡಿರುವ ಗಡ್ಡ, ಅಲ್ಲಿಯ ನಾಗರಿಕರಿಗೆ ಮೋಹಕವಾಗಿ ಕಂಡದ್ದರಿಂದ ಕೂಡಲೆ ನಮ್ಮ ಸುತ್ತಲೂ ಸಾವಿರಾರು ಜನರು ಬಂದು ಸೇರಿದರು. ಅಕ್ಕರೆಯಿಂದ ನನ್ನನ್ನು ಮಾತನಾಡಿಸಿದರು. ಅವರಿಗೆಲ್ಲ ನನ್ನ ಉಡುಪಿನ ಬಗ್ಗೆ ತಿಳಿಯುವ ಹಂಬಲ. ನಾನು ಹೇಗೋ ಧೈರ್ಯ ತಂದುಕೊಂಡು ಅವರಿಗೆಲ್ಲ ಉತ್ತರಿಸುವ ಪ್ರಯತ್ನ ಮಾಡಿದೆ. ನಮ್ಮ ಸಹಾಯಕ್ಕಾಗಿ ಅಲ್ಲಿ ಒಬ್ಬ ದುಬಾಷಿ ಇದ್ದನು. ಅಲ್ಲಿ ನೆರೆದ ಸಾವಿರಾರು ಜನರಿಗೆ ನಾವು, ಅಂತರ್‍ರಾಷ್ಟ್ರೀಯ 'ಶಾಂತಿ' ಅಧಿವೇಶನಕ್ಕೆ ಹೋಗುತ್ತಿರುವ ಭಾರತದ ನಿಯೋಜಿತ ಪ್ರತಿನಿಧಿಗಳೆಂದು ನೇರವಾಗಿ ಹೇಳಿದೆ. ನನ್ನ ಮಾತು ಅರ್ಥವಾದೊಡನೆಯೇ ಸಾವಿರ ಕೈಗಳೂ ಹಸ್ತಲಾಘವಕ್ಕಾಗಿ ಒಂದೇ ವೇಳೆಗೆ ಮುಂದೆ ಬಂದವು. ಆ ಗದ್ದಲದಲ್ಲಿ ಉಜ್‌ಬೆಕ್ ತರುಣಿಯೋರ್ವಳು ನನ್ನ ಕಂಠಕ್ಕೆ ಪ್ರೇಮ ಪೂರ್ವಕ ಮುತ್ತು ಕೊಟ್ಟಳು. ಅನೇಕರು ಅಪ್ಪಿಕೊಂಡರು, ಕೆಲವರು ಭಾರತೀಯ ಪದ್ಧತಿಯಂತೆ ಸಲಾಂ (ನಮಸ್ಕಾರ) ಮಾಡಿದರು. "ಇಂಡಿಸ್ಕಿ-ರೂಸ್ಕಿ (Indiski-Rooski) ಭಾಯಿ ಭಾಯಿ" ಎಂದೂ, ನೆಹರೂ ಡ್ರೂಗ್, ಮತ್ತು 'ಮಿಸ್ಟರ್ ಡ್ರೂರುಝಭಾ' ಎಂದೂ ಹೃದಯ ತುಂಬಿ ಬಂದು ಉಗ್ಗಡಿಸಿದರು. ಸಂತಸದ ಹುಚ್ಚು ಹೊಳೆ! ಮೇರೆದಪ್ಪಿ ಜನ ಸಾಗರದಲ್ಲಿ ಧುಮ್ಮಿಕ್ಕುತ್ತಿದ್ದಾಗ ನನ್ನ ಸ್ನೇಹಿತನೊಬ್ಬನಿಗೆ ಬಾಯಾರಿಕೆ ಬಹಳವಾಗಿ "ಸೋಡಾ" ಬೇಕೆಂದು ಗಟ್ಟಿಯಾಗಿ ಕೂಗಿದಾಗ ಆ ಜನಸಮೂಹವೆಲ್ಲ ಕ್ಷಣದಲ್ಲಿ ಸಾಲಾಗಿ ನಿಂತು ನಮಗೆ ದಾರಿ ಮಾಡಿಕೊಟ್ಟರು. ಅಬ್ಬ ಎಂತಹ ಶಿಸ್ತಿನ ಜೀವನ ಅವರದು! ಸೋಡಾ ತಂದುಕೊಟ್ಟ ಸೋಡಾ ಅಂಗಡಿಯ ಹೆಣ್ಣು ಮಗಳು ನಾವು ಭಾರತೀಯರೆಂದು ತಿಳಿದೊಡನೆ ನಮ್ಮಿಂದ ಹಣ ಸ್ವೀಕರಿಸಲಿಲ್ಲ. ಕೃತಜ್ಞತಾ ಪೂರ್ವಕ ಆಭಾರದೊಂದಿಗೆ ನಾವು ಮೂವರೂ ಹಿಂದಿರುಗೆದೆವು.

ಮಾರನೆಯ ದಿನ ಬೆಳಗಿನಲ್ಲಿ ತಾಷ್ಕೆಂಟಿನಲ್ಲಿ ಕೆಲಸ ಮಾಡುತ್ತಿರುವ ಭಾರತೀಯ ಮಿತ್ರನನ್ನು ಕಾಣಲು ಹೋದೆವು. ಅವನು ತನ್ನ ರಜೆ ದಿನಗಳನ್ನು ಉಜ್‌ಬೆಕ್ ಗೆಳೆಯರ ಬಳಗದೊಂದಿಗೆ ಉತ್ಸುಕತೆಯಿಂದ ಕಳೆಯುತ್ತಿರುತ್ತಾನೆ. ಅವನಿರುವ ಸ್ಥಳ ತಾಷ್ಕೆಂಟ ನಗರದಿಂದ ದೂರ ಇರುವ ಒಂದು ಚಿಕ್ಕ ಹಳ್ಳಿ. ಅವನ ಮನೆಯೂ ಅಷ್ಟೇ ಚಿಕ್ಕದು. ಹಳ್ಳಿಯ ಸುತ್ತಲೂ ನಿಸರ್ಗನಿರ್ಮಿತ ಸೌಂದರ್ಯ ಕಂಡು ನನಗೆ ಕಾಶ್ಮೀರ ಕೊಳ್ಳಗಳ ನೆನಪಾಯ್ತು. ಆ ನೋಟ ಅಷ್ಟೊಂದು ಮೋಹಕವಾಗಿಯೂ ರೋಮಾಂಚಕಾರಿಯಾಗಿಯೂ ಇತ್ತು.

ಉಜ್‌ಬೆಕ್ ಸ್ನೇಹಿತರು ನಮ್ಮನ್ನು (ನನ್ನನ್ನು) ಪಂಜಾಬಿ ಪದ್ಧತಿಯಂತೆಯೇ ತಮ್ಮ ಬಲಗೈಯನ್ನು ಹೃದಯದ ಮೇಲೆ ಇಟ್ಟು ನಮಸ್ಕಾರ ಮಾಡಿ ಗೌರವ ಪೂರ್ವಕವಾಗಿ ಸತ್ಕರಿಸಿದರು. ತಲೆಬಾಗಿ ವಂದಿಸುತ್ತಿರುವಾಗ ಅವರು ನುಡಿದ ನುಡಿ 'ಸಲಾಮ್ ವಾಲೆಕುಮ್' ನಮ್ಮ ಮುಸಲ್ಮಾನ ಸಂಪ್ರದಾಯದಂತೆ ಕಾಶ್ಮೀರಿಗಳ ರೀತ್ಯಾ ನಮಗೆ ಬೆಳಗಿನ ಉಪಹಾರ ಮಾಡಿಸಿದರು.

ರಷಿಯನ್ ಭಾಷೆ — ನಮ್ಮ ಹಿಂದಿ ಭಾಷೆಯಲ್ಲಿರುವ ಸಾಮ್ಯ ಶಬ್ದಗಳು

ಉಜ್‌ಬೇಕ್ ಯುವಕ ಮಿತ್ರರೊಂದಿಗೆ ಮಾತನಾಡುತ್ತಿರುವಂತೆ ನನಗೆ ತಿಳಿದು ಬಂದ ವಿಷಯವೆಂದರೆ—ನಮ್ಮ ಭಾಷೆಯಲ್ಲಿ ಬಳಸುವ ಶಬ್ದಗಳು 'ಆಸಮಾನ' (ಮುಗಿಲು), 'ಜಮೀನ' (ಭೂಮಿ), 'ಬಚ್ಚಾ' (ಕೂಸು), ಮೊಹಬತ್ (ಪ್ರೇಮ) ಈ ಎಲ್ಲ ಶಬ್ದಗಳೂ ಅವರ ಭಾಷೆಯಲ್ಲಿ—ಆಸಮಾನ, ಜಮೀನ, ಬಚ್ಚಾ, ಮೊಹಬತ್ ಎಂದೇ ಉಚ್ಚರಿಸಲ್ಪಡುತ್ತಿರುವುದು ನನಗೆ ಆಶ್ಚರ್ಯವನ್ನುಂಟು ಮಾಡಿತು. ಈ ಎರಡೂ ದೇಶಗಳಲ್ಲಿರುವ ಏಕರೂಪ ಸಂಸ್ಕೃತಿ ನನ್ನಲ್ಲಿ ಅಪೂರ್ವ ಉತ್ಸಾಹವನ್ನುಂಟುಮಾಡಿತು.

ಕೋಮ್ಸೋಮೋಲ್ ಗಾರ್ಡನ್

ಎರಡನೇ ದಿನದ ಸಂಜೆ. ಅದುವೇ ನಮ್ಮ ಕೊನೆಯ ಸಂಜೆ ಎಂದು ಹೇಳಬಹುದು. ನಮ್ಮ ಭಾರತೀಯ ಮಿತ್ರನೊಂದಿಗೆ ಕೋಮ್ಸೋಮೊಲ್ ಗಾರ್ಡನ್ ನೋಡಲು ಹೋದೆವು. ಅವನಿಗೆ ರಶಿಯನ್ ಭಾಷೆ ಚೆನ್ನಾಗಿ ಬರುತ್ತೆ. ನಮಗಾಗಿ ಟಿಕೆಟು ಕೊಂಡುಕೊಳ್ಳಲು ಬುಕ್ಕಿಂಗ್ ಗೇಟಿಗೆ ನಮ್ಮ ಮಿತ್ರ ಹೋದಾಗ ಟಿಕೆಟು ಕೊಡಲು ಕುಳಿತ ಸ್ತ್ರೀ ನಮ್ಮನ್ನು ಭಾರತೀಯರೆಂದು ಗುರುತಿಸಿ ನಮ್ಮನ್ನು ಪುಕ್ಕಟೆ ಒಳಗೆ ಕಳಿಸಿದಳು. ಜೊತೆಗೆ ಓರ್ವ ಬಾಲಕನನ್ನು ನಮ್ಮ ಜೊತೆ ಕಳಿಸಿದಳು. ಭಾರತೀಯರೆಂದರೆ ಅಷ್ಟೊಂದು ಹೆಮ್ಮೆ, ಗೌರವ.

ಗಾರ್ಡನ್‌ನಲ್ಲಿ ಸೀಖ್ ಧರ್ಮದ 'ಸೀಖಕಬಾಬ್' ಇದೆ ಎಂದು ನಾವು ಕೇಳಿದ್ದೆವು. ನಾವು ಅಲ್ಲಿಗೆ ಕಾಲಿರಿಸಿದ ಕೂಡಲೆ ನೂರಾರು ಜನರು ಎದ್ದು ತಮ್ಮ ಟೇಬಲ್ಲಿಗೆ ಬರಬೇಕೆಂದು ಸ್ವಾಗತಿಸಿದರು. ಅವರೆಲ್ಲರಿಗೂ ನಾವು ಉಪಕೃತರಾಗಿ ನಮ್ಮ ಟೇಬಲ್ಲಿನ ಬಳಿ ಕುಳಿತೆವು. ನಮಗೆ ಬೇಕಾದ ತಿಂಡಿಗಾಗಿ ಮಾಣಿಗೆ ಹೇಳುತ್ತಿರುವ ಸಂದರ್ಭದಲ್ಲಿ ದೂರದ ಮೂಲೆಯಿಂದ ಓರ್ವ ತರುಣ ನನ್ನ ಬಳಿ ಓಡಿ ಬಂದು ತನ್ನ ಕೈಯನ್ನು ನನ್ನ ತೋಳಿನಲ್ಲಿ ತೊಡಗಿಸಿ ತನ್ನ ಟೇಬಲ್ಲಿಗೆ ಎಳೆದುಕೊಂಡು ಹೋದನು. ಅವನ ವಿಚಿತ್ರ ಪ್ರೇಮದ ಸೊಬಗಿನಿಂದ ಉದ್ರಿಕ್ತರಾದ ಇಕ್ಕೆಲದ ತರುಣರೂ ಧಾವಿಸಿ ಸುತ್ತ ನೆರೆದು ಟೋಸ್ಟುಗಳನ್ನು ಅರ್ಪಿಸಿದರು. ನಿಮಿಷದಲ್ಲಿ ಒಂದು ರಾಶಿ ಕೂಡಿ ಬಿದ್ದಿತು. ನನಗೆ 'ಬೀರ್' ಕುಡಿಯುವ ಇಷ್ಟವಿರಲಿಲ್ಲ. ಆದರೆ ಅವರ ಪ್ರೀತಿಯ ಒತ್ತಾಯಕ್ಕಾಗಿ ಅವರನ್ನನುಸರಿಸಲೇ ಬೇಕಾಯ್ತು. ಸಾವಿರಾರು ಚುಂಬನಗಳು, ಆಲಿಂಗನಗಳು ಕುಣಿತ—ಏನೆಂದು ಹೇಳಲಿ. ಈ ಘಟನೆ ನನ್ನ ಜೀವಮಾನದಲ್ಲಿ ಅಚ್ಚಳಿಯದೆ ಉಳಿಯುವಂತಹದು.

[ಸಂಗ್ರಹ: ಕಷ್ಣಮೂರ್ತಿ ಕರ್ಪೂರ]

ಕಾರ್ಮಿಕ ಮತ್ತು ಶುಭ್ರ ಹಸ್ತದವ

ಕಾರ್ಮಿಕ

"ನೀನು ಯಾಕೆ ಬಂದೆ ಇಲ್ಲಿಗೆ? ನಿನಗೇನುಬೇಕು? ನೀನು ನಮ್ಮಲ್ಲವನೊಬ್ಬನಲ್ಲ, ಹೊರಗೆ ಹೋಗು!"

ಶುಭ್ರ ಹಸ್ತದವ

"ಆದರೆ ನಾನೂ ನಿಮ್ಮಲ್ಲವನೊಬ್ಬ!"

ಕಾರ್ಮಿಕ

"ಹಾಗೋ? ನಮ್ಮಲ್ಲವನೊಬ್ಬ! ಏನು ಮಾತನಾಡುತ್ತಿರುವಿ? ನನ್ನ ಕೈಗಳನ್ನಾದರೂ ನೋಡು! ನೋಡು, ನೋಡು, ಎಷ್ಟು ಕೊಳೆಯಾಗಿವೆ! ಸಗಣಿಯಾಗಿವೆ, ತಾರುಬಳಿದಂತೆ ಕೊಳೆಯಾಗಿವೆ, ಸಗಣಿಯವಾಸನೆ ಹೊಡೆಯುತ್ತದೆ. ಆದರೆ ನಿನ್ನಕೈಗಳೋ, ಬೆಳ್ಳಗಿವೆ. ಅವುಗಳಿಗಿರುವ ವಾಸನೆಯಾದರೂ ಎಂಥದು?"

ಶುಭ್ರ ಹಸ್ತದವ

"ಮೂಸಿನೋಡು" (ಕೈಗಳನ್ನು ಮುಂದೆಮಾಡಿದ).

ಕಾರ್ಮಿಕ

(ಕೈಗಳನ್ನು ಮೂಸಿ ನೋಡಿ). "ಎಂಥ ವಿಚಿತ್ರ! ಕಬ್ಬಿಣದವಾಸನೆ ಹೊಡೆಯುತ್ತಿರುವಂತೆ ಕಾಣುತ್ತದೆ."

ಶುಭ್ರ ಹಸ್ತದವ

"ಹೌದು, ನಿಜವಾಗಲೂ ಕಬ್ಬಿಣದ ವಾಸನೆ ಹೊಡೆಯುತ್ತದೆ. ಕಳೆದ ಆರು ವರುಷಗಳಿಂದ ನಾನು ಕಬ್ಬಿಣದ ಬೇಡಿಗಳನ್ನು ತೊಟ್ಟಿದ್ದೇನೆ."

ಕಾರ್ಮಿಕ

"ಅದೇಕೆ?"

ಶುಭ್ರ ಹಸ್ತದವ

"ಯಾಕೆಂದರೆ ನಾನು ನಿಮ್ಮೆಲ್ಲರ ಒಳಿತಿಗಾಗಿ ಸಂಬಂಧಿಸಿದವನು. ನಾನು ನಿಮ್ಮನ್ನು, ಅಜ್ಞಾನಿಗಳನ್ನು ಬಿಡುಗಡೆ

ಟರ್ಗೆನೀವ್

ಮಾಡಬೇಕೆಂದು ನಿಮ್ಮ ಮರ್ದಕರ ವಿರೋಧವಾಗಿ ಬಂಡಾಯವೆದ್ದೆ, ಕ್ರಾಂತಿ ಹೂಡಿದೆ, ಅಂತೆಯೇ ಅವರು ನನ್ನನ್ನು ಜೈಲಿಗೆ ಕಳುಹಿಸಿದರು."

ಕಾರ್ಮಿಕ

"ನಿನ್ನನ್ನು ಜೈಲಿಗಟ್ಟಿದರೆ? ಆದರೆ ಕ್ರಾಂತಿ ಏಳಬೇಕೆಂದು ನಿನಗಾರು ಹೇಳಿದರು? ಹೇಳು, ಅದನ್ನು ಹೇಳು!"

ಎರಡು ವರುಷಗಳ ಬಳಿಕ

ಅದೇ ಕಾರ್ಮಿಕ (ಇನ್ನೊಬ್ಬನಿಗೆ)

"ಪೀಟರ್, ಒಂದಿಷ್ಟು ಕೇಳು! ಕಳೆದ ಬೇಸಗೆಯಲ್ಲಿ ಶುಭ್ರಹಸ್ತದವನೊಬ್ಬ ನಿನ್ನೊಂದಿಗೆ ಮಾತನಾಡಿದುದು ನಿನಗೆ ಜ್ಞಾಪಕವಿದೆಯೆ?

ಇನ್ನೊಬ್ಬ ಕಾರ್ಮಿಕ

"ಹೌದು, ನೆನಪಿದೆ. ಯಾಕೆ?"

ಮೊದಲನೆ ಕಾರ್ಮಿಕ

"ಅವನಿಗೆ ಇಂದು ನೇಣುಹಾಕುತ್ತಾರಂತೆ. ಆಗಲೇ ಆಜ್ಞೆಯಾಗಿದೆ."

ಇನ್ನೊಬ್ಬ ಕಾರ್ಮಿಕ

"ಅವನು ಮತ್ತೆ ಬಂಡಾಯ ಹೂಡಿದ್ದನೆ?"

ಮೊದಲನೆ ಕಾರ್ಮಿಕ

"ಹೌದು, ಅವನು ...."

ಇನ್ನೊಬ್ಬ ಕಾರ್ಮಿಕ

"ಬಂಧು, ದಿಮಿತ್ರಿ ಕೇಳು. ಅವನಿಗೆ ನೇಣುಹಾಕುವ ಹಗ್ಗವನ್ನು ನಾವು ತಡೆಯಲಾರೆವೆ? ಅದನ್ನು ತಡೆದರೆ ಯಾರಿಗಾದರೊಬ್ಬರಿಗೆ ಸುದೈವ ತೆರೆಯುತ್ತದೆಯೆಂದು ಹೇಳುತ್ತಾರೆ!"

ಮೊದಲನೆ ಕಾರ್ಮಿಕ

"ಹೌದು ನೀನು ಹೇಳೋದು ಸರಿಯಾಗಿದೆ ಬಂಧು ಪೀಟರ್, ಇದೊಂದು ಒಳ್ಳೇಯೋಚನೆ!"

ಜೀವನವು
ನಾಳೆ !
ನ
ಡಜನರೆ ಕೇಳಿ
ಹ
ಧೈರ್ಯವನು
ತಾಳಿ
ಮುಂದೆ
ರಾಶಿಯನು
ದೂಡಿ
ಜಯಗೀತೆ
ಹಾಡಿ
ಸದೆಯೆ
ಮೇಲೇಳಿ
ರಿದು
ಮೊ ಕ್ರಾಂತಿ
ಕಾಳಿ
ತು ಕಾಲು
ಚಾಚಿ
ದು
ವನು ದೋಚಿ
ವೆ ಸಾಧಿಸಿರಿ
ಯಿಸಿ ನಿರ್ಮಿಸಿರಿ
ಕ್ರಾಂತಿಕಹಳೆ
ವ್ಯುದಿಡೆ ನಾಳೆ!
ಸಿ. ಪಿ. ಕೆ.
ಮೈಸೂರು

ಕಾಂಗ್ರೆಸ್ ಪಕ್ಷ ಯಾರದು ?

ತಾತಾ ಐರ್ನ್ ಅಂಡ್ ಸ್ಟೀಲ್ ಕಂಪೆನಿ (ಟಿಸ್ಕೋ)ಯು ಬಿಹಾರ ಕಾಂಗ್ರೆಸ್ ಸಮಿತಿಗೆ 25 ಸಹಸ್ರ ರೂ.ಗಳನ್ನೂ, ಒರಿಸ್ಸಾ ಕಾಂಗ್ರೆಸ್ ಸಮಿತಿಗೆ 50 ಸಹಸ್ರ ರೂ.ಗಳನ್ನು ಈ ವರುಷ ನೀಡಿದೆ. ಈ 75 ಸಹಸ್ರ ರೂ.ಗಳನ್ನು ಒಟ್ಟು ಉತ್ಪತ್ತಿಯೊಳಗಿನಿಂದ ಕೊಡಲಾಗಿದೆ. "ರಾಜಕೀಯ ಪಕ್ಷಗಳಿಗೆ ನಿಧಿ" ಎಂಬ ತನ್ನ ಕಂಪೆನಿ ನಿಯಮಗಳ ಶೀರ್ಷಿಕೆಯಡಿಯಲ್ಲಿ ಇದನ್ನು ಕೊಟ್ಟಿದೆ. ಇದನ್ನು ಕೊಟ್ಟ ಬಳಿಕ ಈ ಬಗೆಯ ಸಹಾಯ ನೀಡಲು ಹೈಕೋರ್ಟಿನಿಂದ ಒಪ್ಪಿಗೆ ಬಂದಿತು !

ಕಳೆದ ವರುಷ ಚುನಾವಣೆ ಕಾಲದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಟಿಸ್ಕೋ ಕಂಪೆನಿ 10 ಲಕ್ಷ 30 ಸಹಸ್ರ ರೂ.ಗಳ ನಿಧಿಯನ್ನು ಸಮರ್ಪಿಸಿತ್ತೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ವಿಷಯವನ್ನಾವ ಪತ್ರೇದಾರಿ ಪತ್ರಿಕೋದ್ಯಮಿಯೂ ಬಹಿರಂಗಪಡಿಸಿಲ್ಲ ಆದರೆ ಟಿಸ್ಕೋವಿನ 1957—58ರ ವಾರ್ಷಿಕ ವರದಿಯಲ್ಲೇ ಬಹಿರಂಗಪಡಿಸಲಾಗಿದೆ.

ಕ್ಕೆಂದು ಉಪಯೋಗಿಸಲು ಮೀಸಲಾದುದು. ಮೈಮೇಲೆ ಕುಳಿತ ನೊಣ ಜಾಡಿಸಿದಂಥ ಕ್ರಮ ತಮ್ಮ ಮೇಲೆ ನಡೆಯುವದೆಂಬ ಖಾತ್ರಿ ಇರುವ ಈ ಎಂ.ಎಲ್.ಎ.ಗಳು ಈಗಲೂ ಅತ್ಯಂತ ನಿಶ್ಚಿಂತರಾಗಿದ್ದಾರಂತೆ.

ಮನುಷ್ಯರೂ ದನಗಳೂ ಒಂದೇ ಬಗೆಯಾಗಿ ಸಾಯುತ್ತಿದ್ದಾರೆ !

ನೆರೆ ಹಾವಳಿಯು ಫತೇಪುರ್ ಸಿಕ್ರಿಯ ನೂರು ಹಳ್ಳಿಗಳಲ್ಲಿ ರೋಗ—ಮತ್ತು ಸಾವಿನ ವ್ಯಾಪ್ತಿಯನ್ನು ವಿಪರೀತವಾಗಿ ಹೆಚ್ಚಿಸಿವೆ. ಈ ನೆರೆ ಹಾವಳಿಯ ಕಾರಣ: ಆಗ್ರಾ-ರಾಜಸ್ಥಾನ ಗಡಿಗಳಲ್ಲಿ ಕಟ್ಟಲ್ಪಟ್ಟಿರುವ ಅಣೆಕಟ್ಟುಗಳಿಂದ ನುಗ್ಗುವ ಹಾಗೂ ಹೆಚ್ಚುವರಿ ನೀರು ಇವಾಗಿವೆ. ಇದರಿಂದ ಅಕಬರನಿಂದ ಕಟ್ಟಲ್ಪಟ್ಟಿದ ಪ್ರಸಿದ್ಧ ಐತಿಹಾಸಿಕ ತಟಾಕೊಂದು ಅಪಾಯಕ್ಕೀಡಾಗಿದೆ.

ಸಬ್ ಡಿವಿಜನಲ್ ಆಫೀಸರರು ಹಳ್ಳಿಗರಿಗೆ ತಮ್ಮ ಜಾನುವಾರುಗಳನ್ನು ಕಟ್ಟಿ

ನೀವೇನು ಹೇಳುತ್ತೀರಿ

ಈಗ ನೀವು ಹೇಳಿ, ಕಾಂಗ್ರೆಸ್ ಯಾರ ಪಕ್ಷ? ನೆಹ್ರೂ, ಢೇಬರ್ ಭಾಯಿಗಳದೊ ? ಕಾರ್ಮಿಕರನ್ನು ಅರೆ ಹೊಟ್ಟೆಗಳಿಂದ ಸಾಯಿಸುತ್ತಿರುವ ತಾತಾ ಬಿರ್ಲಾಗಳಂಥ ಬಂಡವಾಳಗಾರರದೊ ?

ಪರಿಹಾರ ನಿಧಿಯನ್ನೇ ಬಕ್ಕರಿಸಿದರು

ಕೇರಳದ ಬಗ್ಗೆ ಮಾತೆತ್ತಿದರೆ "ವಿಚಾರಣೆ" ಎಂದು ಕೂಗಾಡುವ ಕಾಂಗ್ರೆಸ್ಸಿಗರು ತಮ್ಮ ಬಕಾಸುರರ ವಿಚಾರ ಮಾತ್ರ ಎಂದೂ ಮಾತನಾಡುವದಿಲ್ಲ.

ಪಶ್ಚಿಮ ಬಂಗಾಲದ ಆಡಿಟ್ ವರದಿಯು ಒಂದೆಡೆ ಹೇಳುತ್ತ "ರಾಜ್ಯಪಾಲರ ಪರಿಹಾರ ನಿಧಿಯಿಂದ 50 ಸಹಸ್ರ ರೂಪಾಯಿಗಳನ್ನು ಅಸನುಂಜಸವಾಗಿ ಉಪಯೋಗಿಸಲಾಗಿದೆ" ಎಂದಿದೆ. ಈ ಹಣವನ್ನು ಇಬ್ಬರು ಕಾಂಗ್ರೆಸ್ ಎಂ. ಎಲ್. ಎ.ಗಳು ಅವರಲ್ಲೊಬ್ಬರು ಈಗ ಸಚಿವರು ತೆಗೆದುಕೊಂಡಿದ್ದಾರೆ. ನಿಧಿಯಿಂದ ತೆಗೆದುಕೊಳ್ಳಲ್ಪಟ್ಟ ಈ ಹಣವನ್ನು ಅವರು ದುರುಪಯೋಗಪಡಿಸಿಕೊಂಡಿರಬೇಕು ಅಥವಾ ಸ್ವಂತಕ್ಕೆ ಉಪಯೋಗಿಸಿಕೊಂಡಿರಬೇಕು ಎಂದು ಆಡಿಟರ್‌ರವರು ಸಂದೇಹ ವ್ಯಕ್ತಪಡಿಸಿದ್ದಾರೆ.

ಇದು ನಡೆದುದು ಪಶ್ಚಿಮ ಬಂಗಾಲದ ಗೌರ್ನರ್ ದಿವಂಗತ ಡಾ॥ ಹರೇಂದ್ರ ಕುಮಾರ್ ಮುಖರ್ಜಿ ಅವರು ಬದುಕಿದ್ದಾಗ. ಹರೇಂದ್ರ ಕುಮಾರರು ದಾನಗಳಲ್ಲಿ ಕೊಡುಗೈಯವರೆಂದು ಖ್ಯಾತರಾಗಿದ್ದರು. ಹಣವನ್ನು ದೋಚಿಕೊಂಡಿರುವ ಈ ಇಬ್ಬರೂ ಎಮ್ ಎಲ್.ಎ.ಗಳು ಪ್ರದೇಶ ಕಾಂಗ್ರೆಸ್‌ನವರ ಪ್ರೀತಿಪಾತ್ರರಂತೆ. ಈ ಹಣ 24 ಪರಗಣಾ ಜಿಲ್ಲೆಯ ನೆರೆ ಹಾವಳಿಯ ನಷ್ಟ ಪರಿಹಾರ

ಕೊಂಡು ಗುಳೇಹೊರಡಬೇಕೆಂದು ಆಜ್ಞೆಯಿತ್ತರು. ಆಗ್ರಾದ ಬಳಿಯಿರುವ ಕಾಡಿನಲ್ಲಿ ರೈತರು ಬೀಡುಬಿಟ್ಟಿದ್ದಾರೆ. ಇದು ಸೈನಿಕರಿಗೆ ಸೇರಿದ್ದು. ಸೈನಿಕರು ಜಾನುವಾರುಗಳ ಪ್ರದೇಶಕ್ಕೆ ಅಡ್ಡಿ ಮಾಡುತ್ತಿದ್ದಾರೆ. ಎಷ್ಟೋ ಜಾನುವಾರುಗಳು ದಾರಿಯಲ್ಲೇ ಮೃತವಾಗಿವೆ.

ನೆರೆ ಹಾವಳಿಗಿಂತ ಮೊದಲಿನಿಂದಲೇ ಇಲ್ಲಿ ಸಿಡುಬಿನ ಹಾವಳಿಯಿದ್ದು ಆಗಲೇ 4,000 ಎಳೆಯ ಹಸುಳೆಗಳನ್ನು ಬಲಿ ತೆಗೆದುಕೊಂಡಿತ್ತು. ಸುಮಾರು 6,000 ಜಾನುವಾರುಗಳು ವಿವಿಧ ರೋಗಗಳಿಂದ ಸತ್ತುಹೋಗಿವೆ.

ಹೀಗಿದ್ದರೂ ಯಾವ ವೈದ್ಯಕೀಯ ಸಹಾಯವೂ ಇಲ್ಲಿಗೆ ಬಂದು ತಲುಪಿಲ್ಲ. ಕಳೆದ 5 ತಿಂಗಳುಗಳಿಂದ ಒಬ್ಬ ಡಾಕ್ಟರನೂ ಈ ಪ್ರದೇಶದಲ್ಲಿ ಕಾಲಿಕ್ಕಿಲ್ಲ. ಮಲೇರಿಯಾದ ಧಾಳಿಗೊಳಗಾಗಿದ್ದ ಸಾರಾಯಿ ಎಂಬ ಗ್ರಾಮಕ್ಕೆ ೬೦ ದಿನಗಳಲ್ಲಿ ಕೇವಲ ೬ ಕ್ವಿನಿನ್ ಗುಳಿಗೆಗಳು ದೊರೆತಿವೆಯಂತೆ.

ಪ್ರಧಾನಿ ನೆಹ್ರೂ, ಮುಖ್ಯ ಮಂತ್ರಿ ಸಂಪೂರ್ಣಾನಂದ, ಅಧ್ಯಕ್ಷ ಢೇಬರ್ ಇವರುಗಳಿಗೆಲ್ಲ ಮನವಿ ಪತ್ರಗಳನ್ನು ಕಳುಹಿಸಲಾಗಿದೆ.

ಕಾಂಗ್ರೆಸ್ಸಿಗರ ಈ ರಾಜ್ಯದಲ್ಲಿ ಜಾನುವಾರುಗಳೂ, ಮನುಷ್ಯರೂ ಒಂದೇ ತೆರನಾಗಿ ಮೂಕ ಪ್ರಾಣಿಗಳಂತೆ ಒದ್ದಾಡುತ್ತಿರುವಾಗ ನಮ್ಮ ಕಾಂಗ್ರೆಸ್ ಪ್ರಭೃತಿಗಳಿಗೆ ಮಾತ್ರ ಇದಾವುದೂ ಕಾಣದು, ಕೂಗು ಕೇಳದು. ಇದು ಅವರಿಗೆ ದೂರವೂ ಅಲ್ಲ, ಪಕ್ಕದಲ್ಲೇ.

ಆದರೆ ಇವರು ಕೇರಳದ ವಿಚಾರಣೆ ನಡೆಸಲು ಮಾತ್ರ ಸಹಸ್ರಾರು ಮೈಲಿ ಕೈ ಚಾಚುತ್ತಿದ್ದಾರೆ.

—ಪ್ರಶ್ನಾರ್ಥಿ

ಸಪ್ತಾಹ ಸ್ಫೂರ್ತಿ

"ಯಾವ ಸ್ಟೇಶನ್ನಿದು ?"

ನನ್ನ ಸ್ನೇಹಿತರು ಕೇಳಿದರು. ಬೆಳಗಾವಿಯಿಂದ ಬಂದಿದ್ದ ನನ್ನೊಬ್ಬ ಗೆಳೆಯರೊಂದಿಗೆ ಮೊನ್ನೆ ೧೧ ನೇ ತಾರೀಖಿನಂದು ಮೈಸೂರಿಗೆ ಹೊರಟೆದೆ. ಬೆಂಗಳೂರು—ಮೈಸೂರು ಬದಿಗೆ ಇದೇ ಮೊದಲನೆಯ ಬಾರಿ ಅವರು ಬಂದಿದ್ದರು. ಅವರಿಗೆ ಈ ಪ್ರದೇಶ ತೀರಾ ಅಪರಿಚಿತವಾಗಿತ್ತು.

"ಚನ್ನಪಟ್ಣ" ಎಂದೆ. ಹಣಿಕಿಕ್ಕಿ ನೋಡಿದರು. ಕತ್ತಲಾದುದರಿಂದ ಊರು ಸರಿಯಾಗಿ ಕಾಣುತ್ತಿದ್ದಿಲ್ಲ. ಬರೀ ವಿದ್ಯುದ್ದೀಪಗಳು ಮಾತ್ರ ಹೊಳೆಯುತ್ತಿದ್ದವು.

... ಝುಕ್, ಝುಕ್ ಎಂದು ಕೆಲವೇ ನಿಮಿಷಗಳಲ್ಲಿ ಬಂಡಿ ಹೊರಟಿತು. ಮತ್ತೆ ಹಲವೇ ನಿಮಿಷಗಳಲ್ಲಿ ಬಂಡಿ ಹಠಾತ್ತನೆ ನಿಂತಿತು. ಸ್ನೇಹಿತರು ಕತ್ತೆತ್ತಿ ದೂರ ನೋಡಿದರು. ಇನ್ನೂ ದೀಪಗಳು ಕಾಣುತ್ತಿದ್ದವು. ಇಷ್ಟುಬೇಗನೆ ಇನ್ನಾವ ಸ್ಟೇಷನ್ ಬಂತೆಂದು ನಾನೂ ಚಕಿತನಾಗಿ ಕತ್ತೆತ್ತಿ ನೋಡಿದೆ.

"ಯಾವ ಸ್ಟೇಶನ್ನು ?" ಎಂದರು ಮತ್ತೆ ಅವರು. "ಚನ್ನಪಟ್ಣ" ಎಂದೆ ನಾನು.

"ಚನ್ನಪಟ್ಣಕ್ಕೆ ಎರಡು ಸ್ಟೇಶನ್ ಅದಾವೇನು ?" ಎಂದರು.

"ಇಲ್ಲಲ್ಲ" ಎಂದೆ.

ಹಾಗೇ ಎದ್ದು ಕಿಟಕಿಯ ಬಳಿ ಬಂದು ಕತ್ತು ಹಾಕಿದೆ.

... ಆಗಲೇ ಡ್ರೈವರು, ಅವನ ಸಹಾಯಕರು, ಗಾರ್ಡು, ಇನ್ನು ಹಲವರು ಕೆಳಗಿಳಿದು ಬಂದು ಗುಂಪು ಸೇರಿದ್ದರು ...

○ ○ ○ ○

... ಹೀಗೆ ಸರಿಯಾಗಿ, ಕಾಲುಗಳನ್ನು ನೇರವಾಗಿಸಿ ಡಬ್ಬು ಮಲಗು, ಹೊಟ್ಟೆ ನೆಲಕ್ಕೆ ಹತ್ತಿರಲಿ, ಕತ್ತು ಕಂಬಿಯಮೇಲಿರಲಿ.

ಮಲಗಿದೆಯಾ? ಮನಸ್ಸನ್ನು ಗಟ್ಟಿಮಟ್ಟಾಗಿಸಿದೆಯಾ ? ಭೀತಿಯೇನಿಲ್ಲ ತಾನೆ? ಭೀತಿಯಿದ್ದರೆ ಈಗಲೇ ಎದ್ದುಬಿಡು, ಏಳು ಏಳು.

... ಇಲ್ಲ, ಇಲ್ಲ ನಿನ್ನ ಎದೆ ಗಟ್ಟಿಯಾಗಿದೆ. ಅದನ್ನು ಕಲ್ಲಾಗಿಸಿರುವಿ. ಮುಖವನ್ನು ಮಣ್ಣಿಗೊತ್ತು. ತಲೆ ಮೇಲೆತ್ತಬೇಡ.

... ಹಾಯ್ ಅನ್ನಲೇ ಇಲ್ಲ. ಅವಕಾಶವೂ ಇರಲಿಲ್ಲ. ದೇಹದಿಂದ ಕತ್ತು ಬೇರೆಯಾಯಿತು. ರುಂಡ ಅಲ್ಲೇ ಉರುಳಿತು.

... ಹೀಗೆ ಅತ್ಯಂತ ವ್ಯವಸ್ಥಿತವಾಗಿ ಯಾವ, ಗುಲ್ಲು ಗಲಾಟೆಯೂ ಇಲ್ಲದೆ, ಪ್ರಶಾಂತವಾಗಿ ಕೊಲೆ ಮಾಡಿದಂತಿತ್ತು.

...ಅಲ್ಲ ಕೊಲೆ ಅಲ್ಲ, ಭಾರವಾದ ಕಬ್ಬಿಣದ ಗಾಲಿ, ಕಬ್ಬಿಣದ ಕಂಬಿ ಇವುಗಳ ಮಧ್ಯ ಸಿಕ್ಕ ಕತ್ತು ಸರಿಯಾಗಿ ತುಂಡಾಗಿತ್ತು. ರುಂಡ—ಮುಂಡಗಳು ಬೇರೆ ಬೇರೆಯಾಗಿದ್ದವು. ನಾವು, ನಾವೇ ಕುಳಿತಿದ್ದ, ಬೆಂಗಳೂರಿನಿಂದ ಮೈಸೂರಿಗೆ ಹೊರಟಿದ್ದ ಚಾಮುಂಡಿ ಎಕ್ಸ್‌ಪ್ರೆಸ್ ರೈಲಿನಡಿಗೆ ದುರ್ದೈವಿಯೊಬ್ಬ ಬಲಿ ಕೊಟ್ಟಿದ್ದ.

... ಬಿಳಿಯ ಪೈಜಾಮು, ಬಿಳಿಯ ಷರ್ಟು, ಮೈಮೇಲೆ ಇನ್ನೇನೂ ಇರಲಿಲ್ಲ. ಮುಡಿಯಿಂದ ಅಡಿಯವರೆಗೆ, ಅಡಿಗಳನ್ನು ದಾಟಿ ಮತ್ತೆ ಸುಮಾರು ಐದಡಿ ದೂರಕ್ಕೆ ನೆತ್ತರು ಹರಿದುಬಂದಿತ್ತು. ಒಟ್ಟು ಸುಮಾರು ಹತ್ತಡಿ ರಕ್ತ ಹರಿದುಬಂದಿತ್ತು—ಅವನ ಬಟ್ಟೆಗಳು ಕುಡಿದು, ಕೆಳಗಿನ ಮಣ್ಣು ಕುಡಿದು ಇಷ್ಟು ಉದ್ದಕ್ಕೆ ಹರಿದ ಆ ನೆತ್ತರೆಷ್ಟಿದ್ದೀತು?

... ನಮ್ಮ ಬೋಗಿಯಲ್ಲಿ ಹಲವು ಹಳ್ಳಿಯ ಹೆಂಗಸರಿದ್ದರು. ಮುಗ್ಧ ಹೆಂಗಸರು ಮರಮರನೆ ಮರುಗಿದರು. ಕ್ಷಣಕಾಲ ಕಲ್ಪಿಸಿದೆ: ಸತ್ತವನ ಹೆತ್ತಾಕೆಯೂ ಇಲ್ಲಿದ್ದಿದ್ದರೆ ...

ಎಷ್ಟೊಂದು ದೀರ್ಘಧ್ವನಿಯಿಂದ ಅಳುತ್ತಿದ್ದಳು. ಪಾಪ ಆ ತಾಯಿ ಎಲ್ಲಿರುವಳೊ! ಅವನನ್ನೇ ನಂಬಿಕೊಂಡವರು ಇನ್ನಾರಿರುವರೋ! ಅವರಿಗೆಲ್ಲ ಸುದ್ದಿ ತಿಳಿದಬಳಿಕ ...

ಕೈವಸ್ತ್ರವನ್ನೆತ್ತಿಕೊಂಡು ಕಣ್ಣಿಗೊತ್ತಿಕೊಂಡೆ. ಪಾಪ! ಪರದೇಶಿ, ಚನ್ನಪಟ್ಣದ ಮಸಣಗಟ್ಟೆಯ ಹತ್ತಿರವೇ ಬಲಿಕೊಟ್ಟಿದ್ದ !

ಒಂದು ಚಾಕು, ತಲೆಗೆ ಸುತ್ತಿದ್ದ ಮಫ್ಲರ್ ಮತ್ತು ಒಂದು ಬ್ಯಾಟರಿಗಳನ್ನು ಪಕ್ಕದಲ್ಲಿ ಸುಮಾರು ಹತ್ತು ಹನ್ನೆರಡಡಿ ದೂರದಲ್ಲಿಟ್ಟಿದ್ದ. ಇನ್ನೂರು ಗಜ ದೂರದಲ್ಲಿದ್ದ ಮಸಣಗಟ್ಟೆ, ಗೋರಿಗಳು ಅಣಕಿಸುತ್ತಿದ್ದವು ...

ಅವನು ಮಲಗಿದ ರೀತಿ, ಕತ್ತುಕೊಟ್ಟರೀತಿ ಎಲ್ಲವನ್ನು ಕಂಡು ಸಾವನ್ನು ಬಯಸಿಬಂದವನೇ ಎಂದು ನೆರೆದವರೆಲ್ಲ ನುಡಿದರು.

○ ○ ○ ○

ವಿದೇಶದ ಸ್ಕಾಲರ್ ಷಿಪ್ ಸಿಕ್ಕಲಿಲ್ಲವೆಂದು ಬೆಂಗಳೂರಿನ ವಿದ್ಯಾರ್ಥಿಯೊಬ್ಬ ಕೆಲವುದಿನಗಳ ಹಿಂದೆ ಮದ್ರಾಸ್‌ರೈಲಿಗೆ ಬಲಿಕೊಟ್ಟಿದ್ದ ... ಹಿಂದೆ ನನ್ನ—ಆದೇತಾನೆ ಮದುವೆಯಾದ—ಸ್ನೇಹಿತರೊಬ್ಬರು ಕಾವೇರಿಯ ಪಾಲಾಗುವ ಕಾಗದ ಬರೆದು ಇಲ್ಲದ ಗಲಾಟೆ, ದುಃಖಗಳಿಗೆ ಕಾರಣರಾಗಿದ್ದರು. ಅವರಿತ್ತ ಕಾರಣ: ಜೀವನದಲ್ಲಿ ಜುಗುಪ್ಸೆ, ಚಿಲ್ಲರೆ ಸಾಲಗಳಹೊರೆ.

....ಇಂಥ ಸುಶಿಕ್ಷಿತರ ಬಗ್ಗೆ ಯಾರು ತಾನೆ ಕನಿಕರದ ಮಾತನ್ನಾಡಿಯಾರು ?

....ಹಳ್ಳಿಯ ಈ ಅಶಿಕ್ಷಿತ (ಒಂದುವೇಳೆ ಅಕ್ಷರ ಬಲ್ಲವನಾಗಿದ್ದರೂ)ನ ಸಂಕಟ ಏನಿತ್ತು ಯಾರಿಗೆ ಗೊತ್ತು? ಚೈತನ್ಯ ಮಯವಾಗಿರುವ ಈ ಜೀವಮಾನದ ಕೊನೆಯಾದ ನಿಶ್ಚೇತನ ಸ್ಥಿತಿಗೆ ಶರಣು ಹೋದ. ಸಾವಿಗಿಂತಲೂ ಹೆಚ್ಚು ಬೆಲೆಯುಳ್ಳ ಅವನ ಆ ತಾಪತ್ರಯಗಳು ಏನೋ ಯಾರಿಗೆ ಗೊತ್ತು ? ಇನ್ನೆಂಥ ಘೋರ ಕಾರಣವಿತ್ತೋ ಯಾರು ಬಲ್ಲರು?

ಚಾಮುಂಡಿಗೆ ಬಲಿ

... ಇತ್ತೀಚೆಗಿನ—ಭಾರತದಲ್ಲಿಯ ಸಾವಿನ—ಸಂಖ್ಯೆಗಳಲ್ಲಿ ಆತ್ಮಹತ್ಯೆಗಳ ಸಂಖ್ಯೆ ಹೆಚ್ಚಾಗಿ ಏರಿದೆ. ಇವುಗಳಲ್ಲಿ ಹೆಚ್ಚಿನ (ಶೇಕಡಾವಾರು) ಸಾವುಗಳ ಕಾರಣ ಘೋರದಾರಿದ್ರ್ಯ, ಕುಟುಂಬಪಾಲನೆಯಲ್ಲಿಯ ಅಸಮರ್ಥತೆ, ತನ್ಮೂಲಕವಾದ ಜೀವನದ ಬಗ್ಗೆಯೇ ಜುಗುಪ್ಸೆ ಕಾರಣವಾಗಿವೆ. ಸರ್ಕಾರದ ಪ್ರಕಟಣೆಗಳೆ ಅಂಕಿಸಂಖ್ಯೆ ಕಾರಣಗಳನ್ನು ಕೊಟ್ಟಿವೆ.

... ಇಂಥವೆಷ್ಟೋ ಸುದ್ದಿಗಳು ಪ್ರಕಟವಾಗುವದಿಲ್ಲ, ನಮಗೆ ಗೊತ್ತಾಗುವುದಿಲ್ಲ. ಏನೇ ಇರಲಿ ಆತ್ಮಹತ್ಯೆಯ ಹೇಡಿತನದ ಪ್ರವೃತ್ತಿ ನಮ್ಮಲ್ಲಿ ದಿನದಿನಕ್ಕೂ ಬೆಳೆಯುತ್ತಿದೆ. ಈ ಘೋರ ನಿರಾಶಾವಾದೀ ಮನೋಭಾವ ಪರಿಸ್ಥಿತಿಯೆದುರು ನಮ್ಮನ್ನು ತೀರಾ ಕ್ಷುದ್ರರನ್ನಾಗಿಸುತ್ತಿದೆ. ಇದೇ ನಮ್ಮ ಹಣೆಬರಹವೆಂದೆನ್ನುವವರಿಗೆ ಕಡಮೆಯಿಲ್ಲ.

— "ಚಂಡಿಚಾಮುಂಡಿ ಪೇಳ್ ಬೇಕಾದುದೇನು ?"

"ಗಂಡುಸಾದರೆ ನಿನ್ನ ಬಲಿಕೊಡುವೆ ಯೇನು ?" (ಕವಿ ಹೇಳಿದ ಸಂದರ್ಭ ಬೇರೆ.)

ಮಾತು ನೆನಪಾಗುತ್ತಿದೆ.

... ನಮ್ಮ ಜನ ಗಂಡಸರೆ. ಆದರೆ ಚಾಮುಂಡಿಗೆ ಬಲಿನೀಡುವದರಲ್ಲೇ ಅವರ ಗಂಡಸುತನ ಅನೇಕ ಸಲ ವ್ಯಕ್ತವಾಗಬಹುದು ....

... ಬಡತನದ ಚಾಮುಂಡಿ ಎದ್ದು ನಿಂತಿದ್ದಾಳೆ. ಅವಳನ್ನು ಕೆಳಗೆ ಕೂರಿಸುವ ಉಪಾಯ ಅವಳಿಗೆ ಬಲಿಯಾಗುವದಲ್ಲ. ನಮ್ಮ ಜೀವನ ಇಷ್ಟು ಅಗ್ಗವಾಗಬಾರದು.

... ಜೀವನವನ್ನು ಇಷ್ಟು ಅಗ್ಗವಾಗಿಸಿರುವ ಇಂದಿನ ಹೀನವ್ಯವಸ್ಥೆ ಪುಡಿಪುಡಿಯಾಗುವದಕ್ಕೆ ನಡೆಸಬೇಕಾದ ಸಾಮೂಹಿಕ ಹೋರಾಟದಲ್ಲೇ ನಮ್ಮ ಗಂಡುತನವಿದೆ, ಅದೊಂದೇ ನಮಗೆ ಬದುಕಲು ಉಳಿದಿರುವ ದಾರಿ ....

"ವೀತಾಶೋಕ"

ಹುರಿಗಾಳು

"ಕಾಂಗ್ರೆಸ್ಸಿನಲ್ಲಿ ಭಿನ್ನಾಭಿಪ್ರಾಯಗ ಳಿವೆ. ಈ ಭಿನ್ನಾಭಿಪ್ರಾಯಗಳ ಮಥ ನವಾಗಿ ಅಮೃತ ಬರಬೇಕು." ಎಂಬು ದಾಗಿ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಹೆಚ್. ಕೆ. ವೀರಣ್ಣ ಗೌಡರು ಉಡುಪಿ ಯಲ್ಲಿ ಹೇಳಿದರಂತೆ.

"ಹೌದು ಸ್ವಾಮಿ, ಈಗ ಮಥನ ನಡೆ ದಿದೆ, ಹಾಲಾಹಲ ಜತ್ತಿಯವರನ್ನು ಕಬಳಿಸಲು ಇಷ್ಟರಲ್ಲೇ ಬರಲಿದೆ. ನೀವು —ಕಾಂಗ್ರೆಸ್ಸಿನವರೆಲ್ಲರೂ ಹಾಲಾ ಹಲಾನೆ ಬರೋದು. ನೀವೆಲ್ಲ ಹೋದ ಮೇಲೆ ಅಮೃತ ಬರೋದು" ಎಂದು ಒಬ್ಬರೆನ್ನುತ್ತಾರೆ.

೦ ೦ ೦

"ರಾಮಾಯಣ, ಮಹಾಭಾರತಗಳ ಕಾಲದಲ್ಲೂ ಸಾಧಿಲಾಗದ ಮಹಾಕಾರ್ಯ ಗಳು ಈ ೧೧ ವರ್ಷಗಳಲ್ಲಿ ನಡೆದಿವೆ" ಎಂದೂ ಹೇಳಿದರಂತೆ ಹೆಚ್. ಕೇ. ವೀ. ಗೌಡರು.

—ಹೇಳಿ ಸ್ವಾಮಿ, ನಿಮ್ಮ ಆಂಜನೇ ಯ ಯಾವ ಲಂಕೆಗೆ ಬೆಂಕಿಯಿತ್ತ? ಆಂ ಜನೇಯ ಸ್ವಾಮಿ ಲಂಕಾ ಸೇತುವೆಯ ನ್ನು ಕಟ್ಟಿದಂತೆ, ನಿಮ್ಮ ಪಕ್ಷದ ಶ್ರೀ ಹನುಮಂತಯ್ಯನವರು ವಿಧಾನ ಸೌಧ (ನಿಮ್ಮ ನಿಜಲಿಂಗಪ್ಪನವರ ಉದ್ಗಾರ— ಎಷ್ಟೆಂದರೂ ಭಿನ್ನಾಭಿಪ್ರಾಯ) ನಿರ್ಮಿ ಸಿದ್ದಾರೆಂದು ನಿಮಗೆ ಹೆಮ್ಮೆಯೆ? ಕೋ ಟಿಗಳ ಆರೋಹಣಕ್ಕಾಗಿ ವನಮಹೋ ತ್ಸವ (ನೆಡುವಾಗಲೇ ಸತ್ತವು) ನಡೆಸು ತ್ತಿದ್ದೀರೆಂದು ನಿಮಗೆ ಹೆಮ್ಮೆಯೆ? ಯಾ ವುದು ಸ್ವಾಮಿ ನಿಮ್ಮ ಸಾಧನೆಗಳು?

೦ ೦ ೦

"ಅಖಿಲ ಕರ್ನಾಟಕ ರಾಜ್ಯದಲ್ಲಿ ಧರ್ಮ ಹಾಗೂ ನ್ಯಾಯದಿಂದ ನಡೆಯು ವ ಪರಿಸ್ಥಿತಿ ಬರಲಿ" ಎಂಬುದಾಗಿ ಮು ಖ್ಯಮಂತ್ರಿ ಜತ್ತಿ, ಮರಿಯಮ್ಮನ ಹಳ್ಳಿ ಯಲ್ಲಿ ದೇವಾಲಯಗಳ ಶಂಕುಸ್ಥಾಪನೆ ನೆರವೇರಿಸುತ್ತಾ ನುಡಿದರಂತೆ.

—ಅವಿಶ್ವಾಸ ಗೊತ್ತುವಳಿ ಹಿಂದೆ ತಂ ದವರು, ಈಗ ತರಲಿರುವರು, ಮುಂದೆ ತ ರಲಿರುವವರು ಇವರನ್ನು ಕೂಡಾ ಅಂದರೆ ನಿಮ್ಮನ್ನೂ ಕೂಡಾ ಇದರಲ್ಲಿ ಸೇರಿಸಿ ದ್ದೀರಾ?

೦ ೦ ೦

ಹೌದು ಎಂದು ಇತ್ತೀಚೆಗಿನ ವದಂತಿ ಗಳು ಕೆಲವು ಹೇಳುತ್ತಿವೆ. "ನಿಮ್ಮ ಮೇಲೆ ಅವಿಶ್ವಾಸ ಗೊತ್ತುವಳಿ ಬರಲಿರು ವದರಿಂದ ನೀವಾಗಿಯೇ ನಿಜಲಿಂಗಪ್ಪನ ವರಿಗೆ ಮಂತ್ರಿ ಪಟ್ಟವನ್ನು ಬಿಟ್ಟುಕೊಟ್ಟು ಕೈಯಾಡಿಸುತ್ತ, ಕೈಮುರಿದುಕೊಳ್ಳುತ್ತ ಹೊರಡುತ್ತೀರಂತೆ. ನ್ಯಾಯ—ಅನ್ಯಾ ಯಗಳ ತಕ್ಕಡಿ ಸರಿಯಾಗಿಬಿಡುತ್ತ ಬಿಡಿ. ನಿಜಲಿಂಗಪ್ಪನವರೂ ಪಟ್ಟಕ್ಕೆ ಬಂದು ಮತ್ತೆ "ಧರ್ಮರಕ್ಷಣೆ"ಯ ಕಾರ್ಯ ಮಾಡ ಲು ಅವಕಾಶ ಮಾಡಿಕೊಟ್ಟ, ನಿಮಗೆ ಬ ರುವುದು ರಕ್ಷಣೆ, ಮಾಡಿದ ಪುಣ್ಯ ಅವ ರಿಗೆ ಬರುವುದು.

—ಆ—ಸತ್ಯಮೇವ ಜಯತೆ!

೦ ೦ ೦

ಅಂದಹಾಗೆ ನಿಜಲಿಂಗಪ್ಪನವರು ಉ ತ್ತರ ಕರ್ನಾಟಕದ ಸಂಚಾರದಲ್ಲಿದ್ದಾಗ ಕೆಲವು ದಿನಗಳ ಹಿಂದೆ ಮೈಸೂರಿಗೆ "ಕ ರ್ನಾಟಕ ಎಂಬ ಹೆಸರೇ ಇರಲಿ, ಅದು ಬರಬೇಕು" ಎಂದು ಘೋಷಿಸುತ್ತಾ ಬಂ ದರಂತೆ.

—ಮುಖ್ಯ ಮಂತ್ರಿಗಳಾಗಲು, ಜನ ತೆಯ ಭಾವನೆಗಳನ್ನು ಶೋಷಿಸಲು ಮ ತ್ತೊಂದು ನೂತನ ಘೋಷಣೆ ಹಾಗಾ ದರೆ.

೦ ೦ ೦

ತಾವು ಮುಖ್ಯ ಮಂತ್ರಿಯಾಗಿದ್ದಾಗ ಇದನ್ನು ಮಾಡದ ನಿಜಲಿಂಗಪ್ಪನವರಿಗೆ ಮಾತನಾಡಲು ಈಗೇನು ಅಧಿಕಾರ? ಎಂದು ಒಬ್ಬರು ಕೇಳುತ್ತಾರೆ. "ಕರ್ನಾ ಟಕ"ವೆಂಬ ಹೆಸರಿಗಾದರೂ ಹೋರಾಡಿ ವಿಫಲರಾದರೂ ಹೊರಗೆ ಬಂದಿದ್ದರೆ ಅವ ರ ಹೆಸರು ಉಳಿಯುತ್ತಿತ್ತಲ್ಲ ಎಂದೂ ಇವರ ಸಲಹೆ.

೦ ೦ ೦

ಜತ್ತಿಯವರು ತಾವು ಅಧ್ಯಕ್ಷರಾಗಿ ಭೂಸಂಬಂಧವಾಗಿ ಒಪ್ಪಿಸಿದ ಜತ್ತಿ ವರ ದಿಯಂತೆ ಮಂತ್ರಿಗಳಾದ ಮೇಲೆ ಕಾ ನೂನು ಮಾಡಲು ಸೋತು ಸಲಾಂ ಹಾ ಕಿದಂತೆ ನಿಜಲಿಂಗಪ್ಪನವರ ಕತೆಯಾಗಿ ದ್ದರೂ, ಜತ್ತಿಯವರು—ಅವಿಶ್ವಾಸ ಗೊ ತ್ತುವಳಿ ಬಂದು, ಮಂತ್ರಿ ಪಟ್ಟದಿಂದ ಕೆ ಳಗಿಳಿದರೆ "ಜತ್ತಿ ಸಮಿತಿಯ ವರದಿ ಯಂತೆ ರೈತ ಹಿತ ಮಸೂದೆ ಬಂದು ಕಾನೂನಾಗಬೇಕು" ಎಂದು ಹೇಳಲು ಅವರು ಅಧಿಕಾರ ಹೊಂದಿದರೆಂದು ನಾವು ಈ ಮೂಲಕ ಪ್ರಕಟಪಡಿಸು ತ್ತೇವೆ.

೦ ೦ ೦

"ಕಾಂಗ್ರೆಸ್ ಸಂದೇಶ" ಎಂಬುದು ಕಾಂಗ್ರೆಸ್ ಪತ್ರಿಕೆಯ ಮೊದಲ ಸಂಚಿಕೆ ಯನ್ನು ಅವಲೋಕಿಸೋಣವಾಯಿತು.

—31 ಪುಟಗಳಲ್ಲಿ ಒಟ್ಟು 22 ಸಂ ದೇಶಗಳಿವೆ. ಇವುಗಳನ್ನೆಲ್ಲ ಇತ್ತವರು ಕಾಂಗ್ರೆಸ್ಸಿಗರು. ಸಂದೇಹವೇನು ಮಗು ಇನ್ನು ಇದು ಕಾಂಗ್ರೆಸ್ಸಿಗರ ಸಂದೇಶವೆ ನ್ನುವದರಲ್ಲಿ?

—ಅನೇಕ ಹೆಸರುಗಳು ಪ್ರಿಂಟಿಂಗ್ ಇಂಕ್‌ನಲ್ಲಿ (ಪತ್ರಿಕೆಗಳಲ್ಲಿ) ಕಾಣಲು "ಕಾಂಗ್ರೆಸ್ ಸಂದೇಶ" ಬಂದಿದೆ ಯೆಂದು ಸಂದೇಹ ತಾಳದಿರು ಮಗುವೆ.

—ಚೌಚೌವಾಲ

ಸವದತ್ತಿಯಲ್ಲಿ ತುಂಬಿದ ಕೊಳಚೆ!

ಸವದತ್ತಿಯ ಮುಖ್ಯ ಜನದಟ್ಟಣೆಯ ಸ್ಥಳವಾದ ಕಾಳವ್ವನ ಗುಡಿಯ ಹತ್ತಿರ ಚ ಹಾದಂಗಡಿಯವರಿಂದಾಗಿ ನೀರಿನ ಕೊಳ ಚೆ ಜಾಸ್ತಿಯಾಗಿ ಊರಿನ ನಾಗರಿಕರ ಆ ರೋಗ್ಯಕ್ಕೆ ಗಂಡಾಂತರ ಉಂಟಾಗಿದೆ.

ಈ ಚಹಾದ ಅಂಗಡಿಗಳಲ್ಲಿ ಮುನ್ಸಿಪ ಲ್ ಮ್ಯಾ. ಕ. ಸದಸ್ಯರೊಬ್ಬರ ಅಂಗಡಿ ಯೂ ಒಂದಾಗಿದ್ದು ಇವರ ಅಂಗಡಿಗಿರು ವ ನಳದಿಂದ ಅತಿಶಯ ನೀರು ಹಗಲು ರಾತ್ರಿ ವ್ಯರ್ಥವಾಗಿ ಸೋರಿ ಸೋರಿ ವಿಪರೀತ ಗಲೀಜಾಗಿ ಕೊಳೆತ ವಾಸನೆ ಹೊಡೆಯುತ್ತಿದೆ. ಡ್ರೇನೇಜ್ ವ್ಯವಸ್ಥೆ ಇಲ್ಲದಿರುವುದು ಇದಕ್ಕೊಂದು ಕಾರಣವಾ ಗಿದ್ದರೂ ಸದರೀ ಸದಸ್ಯರು ಅನುಸರಿ ಸುತ್ತಿರುವ ಉದ್ಧಟತನವೂ ಕಾರಣವಾಗಿ ದ್ದರೂ ಸದರೀ ಮಹಾಶಯರು ಅನುಸರಿ ಸುತ್ತಿರುವ ಉದ್ಧಟತನವೂ ಕಾರಣವಾ ಗಿದೆ. ಇಲ್ಲಿಯೇ ಪೋಸ್ಟ್ ಆಫೀಸ್, ಕಂಬಾರ—ಬಡಿಗೇರ, ಮೇದಾರರ ಹೀಗೆ ಜನ ಒಂದಿಲ್ಲೊಂದು ಕಾರಣದಿಂದ ನೆರೆ ಯುವ ಪ್ರದೇಶವೂ ಆಗಿದೆ. ಈ ದುರ್ಗಂ ಧ ವಾಸನೆಯಿಂದ ಸಾರ್ವಜನಿಕ ಆರೋ ಗ್ಯ ಪೂರಾ ಕೆಟ್ಟುಹೋಗಿ ದವಾಖಾನೆಗೆ ಎಡತಾಕುವ ಪ್ರಸಂಗ ಬಂದಿದೆ. ಈ ವಿ ಷಯದತ್ತ ಸದರೀ ಸದಸ್ಯರ ಗಮನ ಸೆಳೆ ದಾಗ "ಈ ನಳವನ್ನು ಬಂದ ಮಾಡಲಿಕ್ಕೆ ಸಾಧ್ಯವಿಲ್ಲ, ಯಾರು ಕೇಳಿಸುತ್ತಾರೋ ನೋಡುವೆನು" ಎಂದು ಮುಂತಾಗಿ ಅ ಹಂಕಾರದ ಮಾತನ್ನಾಡಿದರು. ಮೂರ ನೆಯ ವಾರ್ಡಿನಿಂದ ಆರಿಸಿ ಬಂದ ಇವರು ಐದನೆಯ ವಾರ್ಡಿನಲ್ಲಿ ಇರುವದರಿಂದ ಹೀ ಗೆನ್ನುತ್ತಾರೆ ಎಂದು ಭಾವಿಸಬೇಕಾಗಿದೆ. ಕಾರಣ ಆರೋಗ್ಯ ಶಾಖೆಯ ಅಧಿಕಾರಿ ಗಳು ಪ್ರತ್ಯಕ್ಷ ಪರಿಶೀಲನೆ ನಡೆಸಿ ಅಧಿಕಾ ರದ ದುರುಪಯೋಗ ನಡೆಸುವವರ ಮೇಲೆ ಕ್ರಮ ಕೈಕೊಂಡು ನಾಗರಿಕರ ಆರೋಗ್ಯ ವನ್ನು ಕಾಪಾಡಬೇಕಾಗಿ ಪ್ರಾರ್ಥನೆ.

ಹಜ್ರತ್‌ಸಾಬ್ ಹುಸೇನ್‌ಸಾಬ್ ಸನದಿ,
ಸವದತ್ತಿ.

ಸಂಪಾದಕರಿಗೆ ಪತ್ರಗಳು

ಪಾವಗಡದಲ್ಲಿಯ ಬ್ಯಾಂಕು

ಇಲ್ಲಿಯ ಎಲ್. ಎಂ. ಇ. ಎಸ್. ಬ್ಯಾಂ ಕಿನಲ್ಲಿ ಹನುಮಂತಪ್ಪ ಎಂಬವರು ಸಾಲ ತೆಗೆದುಕೊಂಡು ೨೬—೬—೫೮ರಲ್ಲಿ ಕಂ ತು ಮೊಬಲಗು 128=00 ಕೊಟ್ಟಿರು ತ್ತಾರೆ. ಆದರೆ ಸೆಕ್ರೆಟರಿಗಳು ಅವರಿಗೆ ರಶೀದಿ ಕೊಡದೆ ಬಹಳೇ ಸತಾಯಿಸುತ್ತಿ ದ್ದಾರೆ. ಸೆಕ್ರೆಟರಿಗಳು ಯಾಕೆ ಹೀಗೆ ಮಾಡುತ್ತಿದ್ದಾರೆಂಬುದು ಸಂದೇಹಕ್ಕಾಸ್ಪ ದವಾಗಿದೆ. ಇಂತಹ ಬೇಂಕುಗಳಲ್ಲಿ ಇಂ ತಹ ಕಿರುಕುಳಗಳು ನಡೆದರೆ ರೈತರುಗಳಿ ಗೆ ಬಹಳೇ ಕಷ್ಟವಾಗುತ್ತದೆ. ಘನ ಸರ ಕಾರದವರು ಇತ್ತ ಗಮನ ಕೊಟ್ಟು ಇದ ನ್ನ ಸರಿಪಡಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಪಿ. ಹನುಮಂತಪ್ಪ,
ಪಾವಗಡ.

ಕಾರ್ಮಿಕರ ಮನೆಗಳು ಬೇರೆಯವರಿಗೆ!

ಹಂಹರದಲ್ಲಿ ಕಿರ್ಲೋಸ್ಕರ ಕಂಪೆನಿಯ ವರು ಕಾರ್ಮಿಕರಿಗೋಸ್ಕರ ಕಟ್ಟಿಸಿದ ಕ್ವಾ ರ್ಟರುಗಳು ಅವರಿಗೆ ದಕ್ಕುತ್ತಿಲ್ಲ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ತಮ್ಮ ಸಂ ಬಂಧಿಕರಿಗೆ ಕೊಡುತ್ತಿದ್ದಾರೆ. ಅಷ್ಟೇ ಅಲ್ಲ, ಊರಲ್ಲಿ ಮನೆ ಸಿಕ್ಕುತ್ತಿಲ್ಲವೆಂದು ಸ ರಕಾರಿ ನೌಕರರು ಲೇಬರ್ ಕ್ವಾರ್ಟರ್ಸ್ ನಲ್ಲಿಯೇ ಕೆಲವು ತಿಂಗಳುಗಳಿಂದ ವಾಸಿ ಸುತ್ತಿರುವದಾಗಿ ತಿಳಿದಿದೆ. ಕಾರ್ಮಿಕರಿ ಗೆಂದಿದ್ದ ಈ ಮನೆಗಳು ಇದ್ದಾದರೂ ಏನು ಪ್ರಯೋಜನ? ಅಧಿಕಾರಿಗಳು, ಸಂಬಂಧಿಗಳು ಇವರಿಗೆ ಕೊಡುವದಾದರೆ ಲೇಬರ್ ಕ್ವಾರ್ಟರ್ಸ್ ಎಂಬ ನಾಟಕವಾ ದರೂ ಯಾಕೆ? ಈ ಅನ್ಯಾಯವನ್ನು ಯಾರಾದರೂ ತಪ್ಪಿಸಿಯಾರೆ?

ಓರ್ವ ನಾಗರಿಕ.

ಭಾರತ ಕಮ್ಯೂನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಲಿಯ....

(೩ನೇ ಪುಟದಿಂದ)

ಕೇರಳದಲ್ಲಿ ಇಡೀ ಪ್ರಜಾಪ್ರಭುತ್ವದ ಮ ತ್ತು ಪ್ರಜಾಪ್ರಭುತ್ವಸಂಸ್ಥೆಗಳ ಮೂಲಗ ಳಿಗೇ ಸವಾಲು ಒದಗಿದೆ. ತಮ್ಮ ಕೃತ್ಯಗ ಳಿಂದಾಗಿ ಕಾಂಗ್ರೆಸ್ ನಾಯಕರುಗಳು ಭಾರತದ ಸಂವಿಧಾನವನ್ನು ತೀವ್ರಪರೀಕ್ಷೆ ಗೆ ಗುರಿಮಾಡಿದ್ದಾರೆ. ಸಂವಿಧಾನದ ಪವಿ ತ್ರತೆಯಬಗ್ಗೆ ಹೇಳುತ್ತಿದ್ದುದೆಲ್ಲವೂ ಇಂ ದು ಪರೀಕ್ಷೆಗೆ ಗುರಿಯಾಗಿದೆ.

ಕೇರಳ ಸರಕಾರದ ರಕ್ಷಣೆಗಾಗಿ ಇಂದಿ ನ ಹೋರಾಟವು ಭಾರತದ ಪ್ರಜಾಪ್ರಭು ತ್ವ ಮತ್ತು ಪ್ರಗತಿಯ ಭವಿತವ್ಯದ ಬೃಹ ತ್ ಹೋರಾಟದ ಅಭೇದ್ಯ ಅಂಗವಾಗಿದೆ.

ಕೇರಳ ಸರಕಾರದ ರಕ್ಷಣೆಯಲ್ಲಿ ಸ್ಥಿರ ರ್ಯವಾದ ನಿಲುವೆಯನ್ನು ತೆಗೆದುಕೊಂ ಡಿರುವ ಕೇರಳದ ಜನತೆಗೆ ಭಾರತ ಕಮ್ಯೂ ನಿಸ್ಟ್ ಪಾರ್ಟಿಯ ರಾಷ್ಟ್ರೀಯ ಮಂಡಲಿ ಯು ತನ್ನ ಹೃತ್ಪೂರ್ವಕವಾದ ಅಭಿನಂದ ನೆಗಳನ್ನು ಸಲ್ಲಿಸುತ್ತದೆ. ಕೇರಳ ರಾಜ್ಯ ದ ಸೇವೆಯಲ್ಲಿ ಮತ್ತು ಎಷ್ಟೇ ಅಡ್ಡಿ ಆತಂ ಕಗಳು ಮತ್ತು ಕಷ್ಟದ ಪರಿಸ್ಥಿತಿಗಳಿದ್ದರೂ ಮತ್ತು ಸಂವಿಧಾನ ಹಾಗೂ ಇತರ ಮಿತಿ ಗಳಿದ್ದರೂ ಅಲ್ಲಿನ ಜನತೆಯ ಸೇವೆಯಲ್ಲಿ ಕಮ್ಯೂನಿಸ್ಟ್ ನೇತೃತ್ವದಲ್ಲಿರುವ ಮಂತ್ರಿ ಮಂಡಲದ ಕಾರ್ಯದ ಬಗ್ಗೆ ಅದು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ.

ರಾಷ್ಟ್ರೀಯ ಮಂಡಲಿಯು ಕೇರಳ ಕ ಮ್ಯೂನಿಸ್ಟ್ ಪಕ್ಷದ ಸದಸ್ಯರುಗಳು ಮತ್ತು ಗೆಳೆಯರುಗಳು ಜನಸಮೂಹದ ಸೇವೆಯ ಲ್ಲಿ ಅವರ ಗುರುತರ ಪಾತ್ರದ ಉತ್ಸಾಹ ಪೂರಿತ ವರದಿಯನ್ನು ಗಮನಿಸಿ, ಅವರಿಗೆ ತನ್ನ ಸಂಪೂರ್ಣ ಸೌಹಾರ್ದವನ್ನು ವ್ಯಕ್ತ ಗೊಳಿಸುತ್ತದೆ.

ರಾಷ್ಟ್ರೀಯ ಮಂಡಲಿಯು ಎಲ್ಲ ಪಾರ್ಟಿ ಘಟಕಗಳು, ಪಾರ್ಟಿ ಸದಸ್ಯರುಗಳು, ಹಿ ತೈಷಿಗಳು ಮತ್ತು ಪಾರ್ಟಿಯ ಗೆಳೆಯರು ಕೇರಳ ಸರಕಾರದ ಬೆಂಬಲವಾಗಿ ದೇಶಾ ದ್ಯಂತ ಜನಸಮೂಹವನ್ನು ಒಂದುಗೂಡಿ ಸುವುದರಲ್ಲಿ ತಮ್ಮ ಪ್ರಯತ್ನವನ್ನು ದ್ವಿಗು ಣಗೊಳಿಸಬೇಕೆಂದೂ ಮತ್ತು ತನ್ಮೂಲಕ ಜನತೆಗೆ ಮತ್ತು ದೇಶಕ್ಕೆ ನಿಸ್ವಾರ್ಥ ಸೇವೆ ಯನ್ನು ಸಲ್ಲಿಸುವ ಮಹತ್ಕಾರ್ಯ ಮುಂ ದೊರೆಸಬೇಕೆಂದೂ ಕರೆ ಕೊಡುತ್ತದೆ.

ಆಹಾರ ಸಮಸ್ಯೆಗೆ ಮದ್ದು: ಪ್ರಗತಿಪರ ಭೂಶಾಸನ

ಆಹಾರ ಬೆಲೆ ಏರಿಕೆಯನ್ನು ಸರಕಾರ ಕೂಡಲೇ ತಡೆಗಟ್ಟುವುದು ಅತ್ಯಗತ್ಯ

ಬೆಂಗಳೂರಿನಲ್ಲಿ ಸರ್ವಪಕ್ಷಗಳ ಬಹಿರಂಗ ಸಭೆ

ಬೆಂಗಳೂರಿನ ಚಾಮರಾಜಪೇಟೆಯ ಜೈಶ್ರೀ ಚಲಚ್ಚಿತ್ರ ಮಂದಿರದ ಸಮೀಪದಲ್ಲಿ—ಚಾಮರಾಜಪೇಟೆಯ ವೆಲ್‌ಫೇರ್ ಅಸೋಸಿಯೇಶನ ಆಶ್ರಯದಲ್ಲಿ ಆಹಾರ ಬೆಲೆಯೇರಿಕೆ ಬಗ್ಗೆ ಸರ್ವಪಕ್ಷಗಳ ಸಭೆಯೊಂದು ತಾ. 12-10-58ರಂದು ಸಂಜೆ ನಡೆಯಿತು.

ಸಭೆಯ ಅಧ್ಯಕ್ಷತೆಯನ್ನು ಶ್ರೀ ಅನಂತರಾಮನ್ (ಕಾಂಗ್ರೆಸ್) ಮಾಜಿ ವಿಧಾನ ಸಭಾ ಸದಸ್ಯರು ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ವೆಂಕಟರಾಯರು (ಜನಸಂಘ) ಆಹಾರ ಬಿಕ್ಕಟ್ಟನ್ನು ವರ್ಣಿಸಿ, ಸರಕಾರದ ಧೋರಣೆಯನ್ನು ಖಂಡಿಸಿ ಮಾತನಾಡಿದರು. ಆದರೆ, ಅದೇ ಜನಸಂಘದ ಮುಖಂಡರೊಬ್ಬರಾದ ಶ್ರೀ ಶ್ರೀನಿವಾಸ ರಾವ್‌ರವರು ಮಾತಾಡುತ್ತಾ ಸರಕಾರದ್ದೇನೂ ತಪ್ಪಿಲ್ಲ, ಜನರದ್ದೇ ತಪ್ಪು, ಜನರು ಹೆಚ್ಚು ಉತ್ಪಾದಿಸಬೇಕು, ಹೆಚ್ಚು ದುಡಿಯಬೇಕು, 24 ಘಂಟೆ ಕೆಲಸ ಮಾಡಬೇಕು, ನೆಹ್ರೂರವರು 24 ಘಂಟೆಗಳೂ ಕೆಲಸ ಮಾಡುತ್ತಾರೆ, ಜನರು ಸೋಮಾರಿಗಳಾಗಿದ್ದಾರೆ. ಮುಷ್ಕರ, ಗಲಾಟೆ ಮಾಡುವುದರಲ್ಲೇ ನಿರತರಾಗಿದ್ದಾರೆ, ಎಂದು ಮುಂತಾಗಿ ಮಾತಾಡಿದರು. ಶ್ರೀ ರಾಮನಾರ್ಥ (ಸ್ವತಂತ್ರ)ರವರು ಮಾತನಾಡುತ್ತ ದೇಶಾದ್ಯಂತ ದಿನದಿಂದಿನಕ್ಕೆ ಹದಗೆಡುತ್ತಿರುವ ಆಹಾರ ಬಿಕ್ಕಟ್ಟನ್ನು ಬಣ್ಣಿಸಿ, ಯೋಗ್ಯವಾದ ರೀತಿಯಲ್ಲಿ ಭೂಸುಧಾರಣೆಯಾಗದೆ, ಆಹಾರ ಸಮಸ್ಯೆ, ಆರ್ಥಿಕ ಸಮಸ್ಯೆ ಪರಿಹಾರವಾಗಲು ಸಾಧ್ಯವಿಲ್ಲವೆಂದರು.

ಶ್ರೀ ಶಂಭುಲಿಂಗ (ಪಿ ಎಸ್.ಪಿ)ರವರು, ಆಹಾರ ಸಮಸ್ಯೆಗಳ ಬಗ್ಗೆ ಸಾಧಾರಣವಾಗಿ ಒಳ್ಳೆ ರೀತಿಯಲ್ಲಿ ಮಾತಾಡಿದರು. ಶ್ರೀ ಗುರುಸ್ವಾಮಿ (ಸ್ವತಂತ್ರ)ರವರು ಮಾತಾಡುತ್ತಾ ದೇಶದಲ್ಲಿ ಆಹಾರ ಬಿಕ್ಕಟ್ಟು ಅಷ್ಟೊಂದು ಉಲ್ಬಣಾವಸ್ಥೆಯಲ್ಲಿಲ್ಲ, ಸರಕಾರ ಅಗ್ಗದರದಂಗಡಿ ತೆರೆದಿದ್ದರೆ, ಅಲ್ಲಿಂದ ಅಕ್ಕಿ ಕೊಂಡುಕೊಳ್ಳುವವರೇ ಇಲ್ಲ, ಹೀಗಿರುವಾಗ, ಸರಕಾರದ್ದೆಲ್ಲಿ ತಪ್ಪಿದೆ? ರಾಜಕೀಯ ಪಕ್ಷಗಳು ಹೇಳುವಷ್ಟು ಆಹಾರ ಬಿಕ್ಕಟ್ಟಿಲ್ಲವೆಂದರು ಶ್ರೀ ನರಸಿಂಹಮೂರ್ತಿ ರಾವ್ (ಕಾರ್ಯದರ್ಶಿ, ರೈತ ಸಂಘ, ತುಮಕೂರು) ಇವರೂ ಹೆಚ್ಚು ಕಮ್ಮಿ ಇದೇ ಧಾಟಿಯಲ್ಲಿ ಮಾತಾಡಿದರು.

ಶ್ರೀ ಸೂರ್ಯನಾರಾಯಣ ರಾವ್ (ಕಾರ್ಯದರ್ಶಿ, ಕಮ್ಯೂನಿಸ್ಟ್ ಪಾರ್ಟಿ, ಬೆಂಗಳೂರು ಜಿಲ್ಲಾ ಸಮಿತಿ) ಮಾತಾಡುತ್ತಾ—ನಮ್ಮ ದೇಶದಲ್ಲಿ ಈ ಹೊತ್ತು ಆಹಾರ ಸಮಸ್ಯೆ ದಿನದಿನಕ್ಕೆ ಬೃಹದಾಕಾರವಾಗಿ ಬೆಳೆಯುತ್ತಾ ಬರುತ್ತಿದೆ, ಉತ್ತರ ಪ್ರದೇಶ, ಬಿಹಾರ್, ಮೊದಲಾದೆಡೆ ಜನರು ಆಹಾರವಿಲ್ಲದೆ, ದಾರಿಯಲ್ಲಿ ಬಿದ್ದು ನಾಯಿ ಸಾಯುವ ಹಾಗೆ ಸಾಯುತ್ತಿದ್ದಾರೆಂದೂ, ಇದಕ್ಕೆ ಸರಕಾರ ಆದಷ್ಟು ಬೇಗ ಪರಿಹಾರ ಮಾರ್ಗ ಹುಡುಕಬೇಕೆಂದೂ, ಹೊಸ ಕರ್ನಾಟಕದಲ್ಲಿ ಆಹಾರ ಸಮಸ್ಯೆ ತಲೆಯೆತ್ತುವ ಕಾರಣಗಳೇ ಇಲ್ಲವೆಂದೂ, ಕರ್ನಾಟಕದ ಎಷ್ಟೋ ಭಾಗಗಳಲ್ಲಿ—ಗೋಧಿ, ಜೋಳ, ರಾಗಿ, ಅಕ್ಕಿ ದವಸ-ಧಾನ್ಯಗಳು ಟನ್ನುಗಟ್ಟಲೆ ಬೆಳೆಯುತ್ತವೆಯೆಂದೂ, ಅಂಕೆ-ಸಂಖ್ಯೆಗಳ ಮುಖಾಂತರ ವಿವರಣೆಯಿತ್ತರು.

ಮುಂದುವರಿಯುತ್ತಾ—ನಮ್ಮ ದೇಶಾದ್ಯಂತ ಯೋಗ್ಯವಾದ ಭೂಸುಧಾರಣೆಯಾಗದೆ, ಆಹಾರ ಬಿಕ್ಕಟ್ಟು, ಆಹಾರಗಳನ್ನು ಬೆಳೆಸುವ ರೈತರ ಕಷ್ಟ-ನಷ್ಟಗಳನ್ನು ಹೋಗಲಾಡಿಸಲು ಈ ಸರಕಾರದಿಂದ ಸಾಧ್ಯವಿಲ್ಲವೆಂದೂ, ಬಡವನು ಬೆಳೆಸಿದಂತಹ ಕಾಳುಗಳನ್ನು ಒಂದಕ್ಕೆ ಹತ್ತು ಪಾಲು ಬೆಲೆಯೇರಿಸಿ, ಕೊಳ್ಳೆ ಲಾಭ ಹೊಡೆದು ಕಳ್ಳಸಂತೆ ಮಾಡಿ, ಹೇಳರ ಧನಗಳಿಸುವಂತಹ ಕಾಳಸಂತೆ ಕದೀಮರನ್ನು ಶಿಕ್ಷಿಸಬೇಕೆಂದೂ ತಿಳುಹಿಸಿದರು.

ಕೊನೆಗೆ ಅಧ್ಯಕ್ಷರ ಭಾಷಣವಾಗಿ, ನಿರ್ಣಯಗಳೊಂದಿಗೆ ಸಭಾಂತ್ಯವಾಯಿತು.

ಪಾರ್ಟಿ ಚಟುವಟಿಕೆಗಳು

ದಾವಣಗೆರೆ

ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಶ್ರೀ ಎನ್. ಎಲ್. ಉಪಾಧ್ಯಾಯರು ಭಾರತ ಕಮ್ಯೂನಿಸ್ಟ್ ಪಾರ್ಟಿಯ ದಾವಣಗೆರೆ ಶಾಖೆಯವರು ತಾ. 22—9—58ರಂದು ಗಾಂಧೀ ಮೈದಾನದಲ್ಲಿ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ದಾವಣಗೆರೆ ನಗರ ಸಭೆಯ ಉಪಾಧ್ಯಕ್ಷರಾದ ಶ್ರೀ ಕೆ. ಮಲ್ಲಪ್ಪನವರು ವಹಿಸಿದ್ದರು.

ಶ್ರೀ ಉಪಾಧ್ಯಾಯರು ಮಾತನಾಡುತ್ತ ಕಾಂಗ್ರೆಸ್ ಸರಕಾರವು ಅನುಸರಿಸುತ್ತಿರುವ ಜನವಿರೋಧಿ ನೀತಿಯನ್ನು ಕುರಿತು ವಿವರಿಸಿದರು. ಕೇರಳದ ಬಗ್ಗೆ ನಡೆಯುತ್ತಿರುವ ಅಪಪ್ರಚಾರವನ್ನು ಖಂಡಿಸಿ, ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರದ ಪ್ರಗತಿಪರ ನೀತಿಯನ್ನು ವಿವರಿಸಿದರು.

ಚಿತ್ರದುರ್ಗ ಜಿಲ್ಲಾ ಪಾರ್ಟಿಯ ಸಂಘಟನಾ ಕಾರ್ಯದರ್ಶಿಯವರಾದ ಶ್ರೀ ಎಸ್. ಹನುಮಂತ ರೆಡ್ಡಿ, ಶ್ರೀ ಪಾರ್ಥಸಾರಥಿ ಮತ್ತು ಅಧ್ಯಕ್ಷರಾದ ಶ್ರೀ ಮಲ್ಲಪ್ಪನವರು ಭಾಷಣ ಮಾಡಿದರು. ನಗರ ಶಾಖೆಯ ಕಾರ್ಯದರ್ಶಿ ಹೆಚ್. ಎಸ್. ರಾಮಚಂದ್ರ ರಾವ್ ವಂದನಾರ್ಪಣೆ ಮಾಡಿದರು.

ಪಾರ್ಟಿ ಸದಸ್ಯರ ಸಭೆ

ತಾ. 22-9-'58ರಂದು ರಾತ್ರಿ 10 ಗಂಟೆಗೆ ಶ್ರೀ ಎನ್.ಎಲ್. ಉಪಾಧ್ಯಾಯರು ಪಾರ್ಟಿ ಆಫೀಸಿನಲ್ಲಿ ದಾವಣಗೆರೆ ಮತ್ತು ಹರಿಹರದ ಪಾರ್ಟಿ ಸದಸ್ಯರ ಸಭೆಯಲ್ಲಿ ಮಾತನಾಡಿದರು. ಅಮೃತಸರದಲ್ಲಿ ನಡೆದ ಪಾರ್ಟಿ ಸಮ್ಮೇಳನದಲ್ಲಿ ಸ್ವೀಕೃತವಾದ ರಾಜಕೀಯ ಗೊತ್ತುವಳಿ ಮತ್ತು ಪಾರ್ಟಿಯ ಹೊಸ ಘಟನೆಯ ಬಗ್ಗೆ ವಿಶೇಷವಾಗಿ ತಿಳಿಸಿದರು. ಇದರ ಪರಿಣಾಮವಾಗಿ, ಪಾರ್ಟಿಯನ್ನು ವಿರೋಧಿಸುವವರೂ ಕೂಡ ಕಣ್ಣು ತೆರೆದು ಪಾರ್ಟಿಯ ಬಗ್ಗೆ ಆಸ್ಥೆಯನ್ನು ವಹಿಸುವಂತಾಗಿದೆ. ಇದನ್ನರಿತು ಎಲ್ಲಾ ಪಾರ್ಟಿ ಸದಸ್ಯರೂ ಶಿಸ್ತಿನಿಂದ ದುಡಿಯುವುದಗತ್ಯವೆಂದು ಒತ್ತಿ ಹೇಳಿದರು.

ಹುಬ್ಬಳ್ಳಿ

ಹುಬ್ಬಳ್ಳಿ ಕಮ್ಯೂನಿಸ್ಟ್ ಪಕ್ಷದ ಕಾರ್ಯಕಾರಿ ಮಂಡಳದ ಸಭೆಯು ತಾರೀಕು 28—9—58ರಂದು ರಾತ್ರಿ 9 ಘಂಟೆಗೆ ಪಾರ್ಟಿ ಆಫೀಸಿನಲ್ಲಿ ಶ್ರೀ ವಿ. ಜೆ. ಮುಧೋಳ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯಲ್ಲಿ ಸಾಕಷ್ಟು ಚರ್ಚೆಯಾದ ನಂತರ ಈ ಕೆಳಗಿನ ಗೊತ್ತುವಳಿಗಳು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟವು.

ಹುಬ್ಬಳ್ಳಿ ಭಾರತ ಮಿಲ್ಲಿನ ಮಾಲಿಕರು ಮುಂಬಯಿಯ ಜಯಂತಿಲಾಲ್ ಕಂಪೆನಿಯವರಿಗೆ ಗಿರಣಿಯಲ್ಲಿಯ ಯಂತ್ರಗಳನ್ನು ಮಾರಿ, ಮಿಲ್ಲಿನಲ್ಲಿ ದುಡಿಯುವ 3,000 ಕಾಮಗಾರರ ಹೊಟ್ಟೆಯ ಮೇಲೆ ಹೊಡೆಯುವ ಮಾಲಿಕರ ಈ ಧೋರಣೆಯನ್ನು ಈ ಸಭೆಯು ಖಂಡಿಸುತ್ತದೆ. ಮತ್ತು ಮೈಸೂರು ಸರಕಾರ ವಿಳಂಬ ಧೋರಣೆ ತಾಳದೆ ಕೂಡಲೇ ಈ ಮಿಲ್ಲನ್ನು ಮುಂಬಯಿ ಸರಕಾರ ವಶಪಡಿಸಿಕೊಂಡಂತೆ ತೆಗೆದುಕೊಳ್ಳಬೇಕೆಂದು ಈ ಸಭೆಯು ಸರಕಾರಕ್ಕೆ ಕೇಳಿಕೊಳ್ಳುತ್ತಾರೆ.

ಕಾಮಗಾರರು ಶಾಂತ ರೀತಿಯಿಂದ ಮತಪ್ರದರ್ಶನ ನಡೆಸಿದ್ದರೂ ಹುಬ್ಬಳ್ಳಿ ತಾಲೂಕಾ ಮ್ಯಾಜಿಸ್ಟ್ರೇಟರು 21 ದಿನಗಳ ವರೆಗೆ ಮಿಲ್ಲಿನ ಭಾಗದಲ್ಲಿ 144ನೇ ಸೆಕ್ಷನ್ ಜಾರಿ ಮಾಡಿ, ಕಾಮಗಾರರ ಮೂಲಭೂತ ಹಕ್ಕುಗಳ ಮೇಲೆ ಗದಾಪ್ರಹಾರ ಮಾಡಿದ್ದನ್ನು ಈ ಸಭೆಯು ಪ್ರತಿಭಟಿಸುತ್ತದೆ ಮತ್ತು ಸರಕಾರ ಕೂಡಲೇ ಈ ಆಜ್ಞೆಯನ್ನು ಹಿಂದೆಗೆದುಕೊಳ್ಳಬೇಕೆಂದು ಈ ಸಭೆಯು ಕೇಳಿಕೊಳ್ಳುತ್ತದೆ.

ಪ್ಲಾಂಟೇಷನ್ ಕೆಲಸಗಾರರ ಸಭೆ

ಚಿಕ್ಕಮಗಳೂರು ದುರ್ಗದ ಬೆಟ್ಟದಲ್ಲಿ

ಕರ್ನಾಟಕ ಪ್ರಾಂತ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್ ಆಶ್ರಯದಲ್ಲಿ ದುರ್ಗದಬೆಟ್ಟದಲ್ಲಿ ತಾ. 5-10-58ರಂದು ಬೆಳಗ್ಗೆ 10 ಘಂಟೆಗೆ ಪ್ಲಾಂಟೇಶನ್ ಕೆಲಸಗಾರರ ಸಭೆಯು ಎ. ಅಣ್ಣಾಮಲೈಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಮಿಕರ ಒಗ್ಗಟ್ಟಿನ ಅವಶ್ಯಕತೆಯ ಕುರಿತು ಕಾ॥ ಎಂ. ವಿ. ಭಾಸ್ಕರ್ ಮಾತನಾಡಿದರು. ಕಾರ್ಮಿಕರ ಮೇಲಾಗುವ ಅನ್ಯಾಯ ದಬ್ಬಾಳಿಕೆಗಳ ಕುರಿತು ಕಾ॥ ಎಂ. ವಿ. ಸುಬ್ಬಯ್ಯ, ಎಂ. ಪೆರಿಯಸ್ವಾಮಿ ಮೊದಲಾದವರು ಮಾತನಾಡಿದರು. ಅಧ್ಯಕ್ಷರ ಭಾಷಣದ ನಂತರ ಸಭೆಯು ಜಯಘೋಷಣೆಗಳೊಡನೆ ಮುಕ್ತಾಯವಾಯಿತು.

ಕರ್ಕಿಕುಂಡದಲ್ಲಿ

ಕರ್ನಾಟಕ ಪ್ರಾಂತೀಯ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್ನಿನ ಆಶ್ರಯದಲ್ಲಿ ಕರ್ಕಿಕುಂಡದಲ್ಲಿ ತಾರೀಕು 5—10—58ರಲ್ಲು ಮಧ್ಯಾಹ್ನ 3 ಘಂಟೆಗೆ ಪ್ಲಾಂಟೇಶನ್ ಕೆಲಸಗಾರರ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ನ್ಯೊದು ಅವರು ವಹಿಸಿದ್ದರು. ಎಸ್ಟೇಟಿನ ಕೆಲಸಕ್ಕೋಸ್ಕರ ಉಪಯೋಗಿಸುವ ಉಪಕರಣಕ್ಕೆ ಕಾರ್ಮಿಕರ ಸಂಬಳದಲ್ಲಿ ಹಣ ಹಿಡಿಯುವುದನ್ನು ಪ್ರತಿಭಟಿಸುವ, ಯೂನಿಯನ್ ಕಾರ್ಯಕರ್ತರ ಮೇಲೆ ಪ್ರತೀಕಾರ ಮನೋಭಾವವನ್ನು ತಾಳುವ ಮಾಲೀಕರ ನೀತಿಯನ್ನು ಪ್ರತಿಭಟಿಸುವ ಠರಾವುಗಳನ್ನು ಮಂಜೂರು ಮಾಡಲಾಯಿತು. ಸಭೆಯಲ್ಲಿ ಠರಾವಿನ ಬಗ್ಗೆ ಹಾಗೂ ಸಂಘಟನೆಯ ಬಗ್ಗೆ ಕಾ॥ ಎಂ. ವಿ. ಭಾಸ್ಕರ್, ಪೆರುಮಾಳ್, ಸುಬ್ಬಯ್ಯ ಮೊದಲಾದವರು ಮಾತನಾಡಿದರು. ಜಯಘೋಷಗಳೊಂದಿಗೆ ಸಭೆ ಮುಕ್ತಾಯವಾಯಿತು.

ಮಾಂಬಳ್ಳಿ ರೇಷ್ಮೆ ಕಾರ್ಖಾನೆಯಲ್ಲಿ ಕಾರ್ಮಿಕರ ಹೋರಾಟದಲ್ಲಿ ಮುನ್ನಡೆ

ಮಾಂಬಳ್ಳಿ ಚೌಡೇಶ್ವರಿ ಸಿಲ್ಕ್ ತ್ರೋಯಿಂಗ್ ಅಂಡ್ ವೀವಿಂಗ್ ಮಿಲ್ಲಿನ ಮಾಲೀಕರು ತಾರೀಕು 4—10—58ರಂದು ಯಾವ ನೋಟೀಸು ಇಲ್ಲದೆ ಐದು ಕೆಲಸಗಾರರನ್ನು ಕೆಲಸದಿಂದ ತೆಗೆದು ಹಾಕಿದರು. ಈ ಕೆಲಸಗಾರರು ಮೈಸೂರು ಡಿಸ್ಟ್ರಿಕ್ಟ್ ಸಿಲ್ಕ್ ವರ್ಕರ್ಸ್ ಯೂನಿಯನ್ನಿಗೆ ಸದಸ್ಯರಾಗಿದ್ದಾರೆ. ಇದರ ಬಗ್ಗೆ ಸಂಘದ ಕಾರ್ಯದರ್ಶಿಯಾದ ಟಿ. ಸ್ವಾಮಿಯವರು ।ತಾ॥ 8-10-58 ರಲ್ಲಿ ಮಾಲೀಕರನ್ನು ಭೇಟಿ ಮಾಡಿ ತೆಗೆದು ಹಾಕಿರುವ ಕೆಲಸಗಾರರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸಿದನಂತರ ಮಾಲೀಕರು ಕೆಲಸಗಾರರನ್ನು ಮತ್ತೆ ನೇಮಕ ಮಾಡಿಕೊಂಡರು.

ನಿರಾಹಾರದ ನಿರ್ಧಾರ

ಮಾಂಬಳ್ಳಿ ಸಿಲ್ಕ್ ತ್ರೋಯಿಂಗ್ ಅಂಡ್ ವೀವಿಂಗ್ ಫೆಕ್ಟರಿ ಕೆಲಸಗಾರರಿಗೂ ಮತ್ತು ಮಾಲೀಕರಿಗೂ ಇರುವ ವಿವಾದವನ್ನು ಮೈಸೂರು ಅಸಿಸ್ಟೆಂಟ್ ಲೇಬರ್ ಕಮೀಷನರವರು ಸರಕಾರಕ್ಕೆ ವರದಿಯನ್ನು ಕಳುಹಿಸಿ ಈಗಾಗಲೇ ಆರು ತಿಂಗಳಾದರೂ ಸಹ ವಿವಾದವನ್ನು ಟ್ರಿಬ್ಯೂನಲ್‌ನಲ್ಲಿ ದಾಖಲೇ ಮಾಡದೆ ಇರುವುದನ್ನು ತಾರೀಕು 8-10-58 ರಲ್ಲಿ ಮೇಲ್ಕಂಡ ಫ್ಯಾಕ್ಟರಿಯ ಸರ್ವ ಸದಸ್ಯರ ಸಭೆಯಲ್ಲಿ ಖಂಡಿಸಲಾಯಿತು. ಸರ್ಕಾರ 1-11-58ರ ಒಳಗೆ ಟ್ರಿಬ್ಯೂನಲ್ ಕೊಡದೆ ಇದ್ದಲ್ಲಿ ತಾರೀಖು 1-11-58ರಿಂದ ಫ್ಯಾಕ್ಟರಿ ಮುಂದುಗಡೆ ನಿರಾಹಾರ ಕುಳಿತುಕೊಳ್ಳಬೇಕೆಂದು ತೀರ್ಮಾನಿಸಲ್ಪಟ್ಟಿತು.

ಜಿಲ್ಲಾ ಸ್ಕೂಲ್ ಬೋರ್ಡು ಮತ್ತು ಶಿಕ್ಷಕರ ವರ್ಗಾವರ್ಗಿ

ಬಾಹ್ಯ ಹಸ್ತಕ್ಷೇಪಬೇಡ, ಶಿಕ್ಷಕರು ಸಂಘಟಿತರಾಗಲಿ

ಬಿಜಾಪುರ ಜಿಲ್ಲೆಯ ಸ್ಕೂಲ ಬೋರ್ಡಿನ ಕೆಳಗೆ 4,000 ಪ್ರಾಥಮಿಕ ಶಾಲಾ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಒಂದು ಸಾಲೆಯಲ್ಲಿ ಮೂರು ವರ್ಷ ಸರ್ವಿಸ್ ಆದವರನ್ನು, ಶಿಕ್ಷಕರ ಬೇಡಿಕೆಯನ್ನು ಮನ್ನಿಸಿ, ಅವರಿಗೆ ಅನುಕೂಲವಾಗುವ ಊರಿಗೆ ಬದ್ಲಿ ಮಾಡುವ ರೂಢಿ ಮತ್ತು ಕಾನೂನನ್ನು ಸ್ಕೂಲ ಬೋರ್ಡಿನ ಅಧಿಕಾರಿಗಳು ಅನುಸರಿಸಬೇಕಾಗುತ್ತದೆ. ಪ್ರತಿ ವರ್ಷ ಶಿಕ್ಷಕರನ್ನು ಒಂದು ಸಾಲೆಯಿಂದ ಮತ್ತೊಂದು ಸಾಲೆಗೆ ಬದ್ಲಿ ಮಾಡುವಾಗ, ಆಯಾ ಶಿಕ್ಷಕರ ಬೇಡಿಕೆ ಮತ್ತು ಅನುಕೂಲತೆಗಳನ್ನು ವಿಚಾರ ಮಾಡದೆ, ರೊಕ್ಕ ಬೆಣ್ಣೆ, ಕಟ್ಟಿಗೆ ಮತ್ತು ಮನುಷ್ಯನನ್ನು "ಭಕ್ಷೀಸ" ಕೊಡುವವರಿಗೆ ಮತ್ತು 'ದೊಡ್ಡವರ' ವಸೀಲಿ ಹೆಚ್ಚುವವರಿಗೆಷ್ಟೇ ಬಹುತೇಕ ಬದ್ಲಿಯಾಗುತ್ತಿತ್ತು. ಹಿಂದಿನ ಎರಡು–ಮೂರು ವರ್ಷದ ಸ್ಕೂಲ ಬೋರ್ಡಿನ ಶಿಕ್ಷಕರ ಬದ್ಲಿ ಸಂಬಂಧ ನನ್ನ ಕೈಸೇರಿದ ಪತ್ರಗಳನ್ನು ನೋಡಿದರೆ, ಕೆಲವು ಶಿಕ್ಷಕರಿಗೂ ಮತ್ತು ಸ್ಕೂಲ ಬೋರ್ಡು ಆಫೀಸಿನ ಒಬ್ಬ ಜವಾಬ್ದಾರಿ ಅಧಿಕಾರಿಗೂ ಎಂಥ ಸಂಬಂಧವಿದೆಂಬುದನ್ನು ನೋಡಿ ಆಶ್ಚರ್ಯವಾಗದಿರದು.

"ಬೆಣ್ಣೆ ಕಳುಹಿಸಿದ್ದೇವೆ"

"ನಿಮಗೆ ಇಂಥವನ ಕೂಡ ಬೆಣ್ಣೆ ಕಳಿಸಿದ್ದೇವೆ" ''ಇಂಥ ಊರಿನಿಂದ ಕಟ್ಟಿಗೆ ಕಳಿಸಿದ್ದೇವೆ" ಇಂಥ ಮೂಕ ಪತ್ರಗಳ ಅರ್ಥವನ್ನು ವಾಚಕರೇ ಮಾಡಿಕೊಳ್ಳಬೇಕು. "ರೊಕ್ಕ ಕೊಟ್ಟದ್ದರೂ ಬದ್ಲಿಯಾಗಿಲ್ಲೆಂದು" ದೂರಿಕೊಳ್ಳುವ ಶಿಕ್ಷಕರೂ ಎಷ್ಟೋ ಜನರಿದ್ದಾರೆ. ಶಿಕ್ಷಕರ ಬದ್ಲಿಯೆಂಬುದು ಕೆಲವು ಕಾಂಗ್ರೆಸ್ ವ್ಯಕ್ತಿಗಳ ಗುತ್ತಿಗೆಯಾಗಿತ್ತು. ಪ್ರತಿ ವರ್ಷ ಮೇ ಜೂನ ತಿಂಗಳುಗಳಲ್ಲಿ ಸ್ಕೂಲ ಬೋರ್ಡು ಆಫೀಸಿನ ಒಬ್ಬ ಪ್ರಮುಖ ಅಧಿಕಾರಿಯ ಮನೆಗೂ, ಕೆಲವು ಕಾಂಗ್ರೆಸ ಕಾರ್ಯಕರ್ತರ ಸುತ್ತಲೂ ನೂರಾರು ಶಿಕ್ಷಕರು ಸುಳಿದಾಡುತ್ತಿರುವ ದೃಶ್ಯ ನೋಡುವಂಥಾದ್ದಿತ್ತು. ಹೀಗಾಗಿ ಶಿಕ್ಷಕರ ಗೋಳು ಕಣ್ಣಲ್ಲಿ ನೀರು ತರುವಂತಿತ್ತು.

ಈಗ ತಲೆಶೂಲಿ

ಈಗೊಂದು ವರ್ಷದಿಂದ ಶ್ರೀ ಕಲಾದಗಿ ಎಂಬವರು ಏ. ಓ.ರವರಾಗಿ ನೇಮಿಸಲ್ಪಟ್ಟ ನಂತರ, ಸ್ಕೂಲ ಬೋರ್ಡಿನ ಆಡಳಿತೆಯಲ್ಲಿಯೂ, ಶಿಕ್ಷಕರ ಬದ್ಲಿ ಮಾಡುವ ಪದ್ಧತಿಯಲ್ಲಿಯೂ ಸಾಕಷ್ಟು ಸುಧಾರಣೆಯಾಗಿರುವುದು ಕಂಡುಬರುತ್ತದೆ. ಇವರು ಯೋಗ್ಯ ಆಡಳಿತೆಗಾರರೂ, ನಿರ್ಭೀತಿ ವ್ಯಕ್ತಿಗಳೂ ಇದ್ದಾರೆಂದು ತಿಳಿದುಬರುತ್ತದೆ. ಇವರು ಅಧಿಕಾರ ಸ್ವೀಕಾರ ಮಾಡಿದ ನಂತರ ಲಂಚಗೂಳಿತನವೂ, ವಸೀಲಿ ಬಾಜಿಯೂ ಕಡಿಮೆಯಾಗಿದೆಯೆಂದು ಜನರು ಹೇಳುತ್ತಿರುವರು. ಆದರೆ ಇಷ್ಟು ದಿವಸ ಸ್ಕೂಲ ಬೋರ್ಡು ಆಫೀಸಿನಲ್ಲಿ ಚದುರಂಗದಾಟವಾಡುತ್ತಿದ್ದವರಿಗೆ ಇದರಿಂದ ತಲೆಶೂಲೆ ಶುರುವಾಗಿದೆ.

ಎಂದಿನಂತೆ ಈ ಸಲವೂ ಬದ್ಲಿ ಮಾಡುವ ಕಾಲದಲ್ಲಿ ಶ್ರೀ ಕಲಾದಗಿಯವರು ಶಿಕ್ಷಕರಿಂದ ಅರ್ಜಿಗಳನ್ನು ತರಿಸಿ, ಸರ್ವಸಾಧಾರಣ ಎಲ್ಲಾ ಶಿಕ್ಷಕರಿಗೆ ಸಮಾಧಾನವಾಗುವ ರೀತಿಯಲ್ಲಿ ಬದ್ಲಿ ಮಾಡಿರುವರೆಂಬುದರಲ್ಲಿ ಸಂಶಯವಿಲ್ಲ. ಆದರೆ ತಾ. 11—9—58ರ ಹುಬ್ಬಳ್ಳಿಯ ದಿನಪತ್ರಿಕೆಯಲ್ಲೊಬ್ಬರು ಶ್ರೀ ಕಲಾದಗಿಯವರ ಮೇಲೆ ಅಲ್ಲ ಸಲ್ಲದ ಆರೋಪ ಹೊರಿಸಿದ್ದದ್ದನ್ನು ನೋಡುವಾಗ, ಇಷ್ಟು ದಿವಸ ಶಿಕ್ಷಕರಿಂದ ಹೊಟ್ಟೆತುಂಬಿಸಿಕೊಳ್ಳುತ್ತಿದ್ದವರಿಗೆ ತಿನ್ನಲು ಏನೂ ಸಿಗದಂತಾಗಿ ರುಗ್ಣರೋದನವನ್ನೆಬ್ಬಿಸಿದಂತೆ ಕಂಡುಬರುತ್ತವೆ.

ಅಪಪ್ರಚಾರ

ಹುಬ್ಬಳ್ಳಿಯ ದಿನಪತ್ರಿಕೆಯಲ್ಲಿ ಬಂದ ಬಾತ್ಮಿಯ ಕುರಿತು ಶ್ರೀ ಕಲಾದಗಿಯವರನ್ನು ವಿಚಾರಿಸಲಾಗಿ, ಸರ್ವಸಾಧಾರಣ ಎಲ್ಲಾ ಶಿಕ್ಷಕರಿಗೆ ಸಮಾಧಾನವಾಗುವ ರೀತಿಯಲ್ಲಿ ನಾನು ಬದ್ಲಿ ಮಾಡಿರುತ್ತೇನೆ ಕೆಲವರಿಗೆ ಅನ್ಯಾಯವಾಗಿರಬೇಕೆಂಬುದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ನಾನು ಚೇರ್ಮನ್ನರ ಮಾತು ಕೇಳಿಯೇ ಎಲ್ಲಾ ಬದ್ಲಿ ಮಾಡಿದ್ದೇನೆಂಬುದು ಸುಳ್ಳು ಎಂದು ಹೇಳಿದರು. ಎ. ಓ.ರವರು ಎಷ್ಟು ಸ್ವತಂತ್ರ ವ್ಯಕ್ತಿಯಾಗಿದ್ದರೂ ಕೂಡ ಚೇರ್‌ಮನ್ನರ ಅಭಿಪ್ರಾಯಕ್ಕೆ ಹೊಂದಿಕೊಂಡುಹೋಗಬೇಕಾಗುತ್ತದೆ. ಅದರಂತೆಯೇ, ಎಲ್ಲರಿಗೂ ತಿಳಿದಂತೆ, ಈ ಕಾಂಗ್ರೆಸ್ ರಾಜ್ಯದಲ್ಲಿ ಸ್ವತಂತ್ರ ರೀತಿಯಿಂದ ಆಡಳಿತೆ ನಡೆಸಿಕೊಂಡುಹೋಗುವುದೇ ಅಸಾಧ್ಯ. ಯಾಕಂದರೆ ಹೆಜ್ಜೆ ಹೆಜ್ಜೆಗೂ ಅಡೆತಡೆ ಆತಂಕಗಳು ಬಂದೇ ಬರುತ್ತದೆ. ಆದರೂ ಕೂಡ ಜಿಲ್ಲೆಯ ದಕ್ಷಿಣ ಪಕ್ಷ ಉತ್ತರ ಪಕ್ಷವೆನ್ನದೆ ಸುಮಾರು 400 ಜನ ಶಿಕ್ಷಕರನ್ನು ಕಾಯಂ ಮಾಡಿ, ಆಯಾ ಹುಕುಂ ನೇರವಾಗಿ ಅವರಿಗೇನೇ ತಲುಪುವಂತೆ ಮಾಡಿದರು. ಇವರು ಜಾತಿ–ಪಕ್ಷಗಳನ್ನು ಎತ್ತಿಹಿಡಿಯುತ್ತಿಲ್ಲ. ನ್ಯಾಯವಾಗಿ ದೊರೆಯುವ ಸಿಲೆಕ್ಷನ್ ಗ್ರೇಡುಗಳನ್ನು ಶೀಘ್ರವಾಗಿ ಕೊಡಿಸಿದರು. ಸಂಚಾರದಲ್ಲಿದ್ದಾಗ, ಶಿಕ್ಷಕ–ಶಿಕ್ಷಕಿಯರ ನ್ಯಾಯವಾದ ಬೇಡಿಕೆಗಳನ್ನು ಲಕ್ಷಿಸಿ, ಅವುಗಳನ್ನು ಕಾನೂನಿಗನುಸಾರವಾಗಿ ಕಾರ್ಯಗತ ಮಾಡಿರುವರು.

ಆದರೂ ಕೂಡ ಬಸಹಟ್ಟಿ ಸಾಲೆಯ ಮತ್ತು ಕೆಲವು ಸಾಲೆಗಳ ಶಿಕ್ಷಕರು ಹಲವಾರು ವರ್ಷಗಳಿಂದ ಒಂದೇ ಸಾಲೆಯಲ್ಲಿ ದುಡಿಯುತ್ತಿದ್ದರೂ, ಬದ್ಲಿ ಮಾಡಲಿಲ್ಲೆಂದು ನನ್ನ ಮುಂದೆ ತಕ್ರಾರು ಮಾಡಿದರು. ಇಂಥ ಕೆಲವು ಸಂಗತಿಗಳನ್ನು ಶ್ರೀ ಕಲಾದಗಿಯವರು ಯೋಗ್ಯ ರೀತಿಯಲ್ಲಿ ವಿಚಾರ ಮಾಡಬೇಕು.

ಯಾವದೇ ಒಂದು ಆಡಳಿತೆ ಯೋಗ್ಯರೀಯಲ್ಲಿ ನಿಷ್ಪಕ್ಷತನದಿಂದ ನಡೆಯಬೇಕಾದರೆ ಅಧಿಕಾರಿಗಳ ಕೆಲಸದಲ್ಲಿ ಯಾವ ಪಕ್ಷದವರೂ ಹಸ್ತಕ್ಷೇಪ ಮಾಡಬಾರದು. ಅಧಿಕಾರಿಗಳಿಗೆ ಯೋಗ್ಯ ರೀತಿಯಲ್ಲಿ ಕೆಲಸ ಮಾಡಲು ಅವಕಾಶ ಸಿಗಬೇಕು.

ಶಿಕ್ಷಕರು–ಶಿಕ್ಷಕಿಯರು ತಮ್ಮ ಸಂಕಷ್ಟಗಳನ್ನು ದೂರ ಮಾಡಲು, ಯೋಗ್ಯ ರೀತಿಯಲ್ಲಿ ಎಲ್ಲರಿಗೂ ಅನುಕೂಲವಾಗುವಂತೆ ಬದ್ಲಿ ಮಾಡಿಸಿಕೊಳ್ಳಲು ಶಿಕ್ಷಕರ ಸಂಘವನ್ನು ಕಟ್ಟಿಕೊಳ್ಳಬೇಕು. ಶಿಕ್ಷಕರ ಸಂಘದ ಪ್ರತಿನಿಧಿಗಳು, ಎ. ಓ.ರವರು ಮತ್ತು ಸ್ಕೂಲ ಬೋರ್ಡು ಚೇರ್‌ಮೆನ್ನರು ಕೂಡಿ, ಬದ್ಲಿ ಮೊದಲಾದ ಕೆಲಸಗಳನ್ನು ಮಾಡಿದರೆ, ಲಂಚಗೂಳಿತನ, ವಸೀಲಿಬಾಜಿ, ಕೈವಾಡಗಳೆಲ್ಲ ದೂರವಾಗುವುದರಲ್ಲಿ ಸಂಶಯವಿಲ್ಲ.

ಲೇಖಕ:

ಎನ್. ಕೆ. ಉಪಾಧ್ಯಾಯ

ಬಿಜಾಪುರ

ಕಾಂಗ್ರೆಸ್ಸಿಗರ ಮೋಸದ ಬಲೆಯಲ್ಲಿ

ಶ್ರೀ ಬಸವರಾಜ ಕಟ್ಟಿಮನಿ

(ವಿಶೇಷ ವರದಿ)

ಅಕ್ಟೋಬರ್ ೧ರಂದು ಮಲಾಮರ್ಡಿಯಲ್ಲಿ ರೈತರ ಸಮ್ಮೇಳನವೊಂದು ನಡೆಯಿತು. ಮಲಾಮರ್ಡಿಯ ಕನ್ನಡದ ಖ್ಯಾತ ಕಾದಂಬರಿಕಾರ, ಗ್ರಾಮೀಣ ಜನತೆಯ ಜೀವನಾಡಿಯನ್ನು ತಮ್ಮ ಸಾಹಿತ್ಯದಲ್ಲಿ ಸ್ಪಷ್ಟವಾಗಿ ಮಿಡಿದ ಶ್ರೀ ಬಸವರಾಜ ಕಟ್ಟೀಮನಿಯವರು ಈ ಸಮ್ಮೇಲನದ ಸೂತ್ರಧಾರಿಗಳಾಗಿದ್ದರು. ಶ್ರೀ ಅಣ್ಣುಗುರೂಜಿಯವರು ಅಧ್ಯಕ್ಷತೆ ವಹಿಸಿದ್ದರು. ಅವರು ಯಥಾಪ್ರಕಾರ ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳಿಗೆ ಭಂಗ ಬಾರದಂತೆ ಭೂಸಾಗುವಳಿ ಶಾಸನ ರಚಿಸಲು ಪ್ರಯತ್ನಿಸುವುದಾಗಿ ಆಶ್ವಾಸನೆಯಿತ್ತರು. ಪಿ. ಎಸ್. ಪಿ.ಯ ಶ್ರೀ ವೆಂಕಟೇಶ ಕರಗುಪ್ಪಿಯವರು ಕಾಂಗ್ರೆಸ್ಸಿಗರ ಬಣ್ಣ ಬಯಲಿಗಿತ್ತರು. ಆದರೆ ಒಟ್ಟಿನ ಮೇಲೆ ಇದೊಂದು 'ನಾಟಕ'ದಂತೆ ನಡೆಯಿತು.

ಬರಲಿರುವ ಹೊಲ ಸಾಗುವಳಿ ಕಾಯದೆಯ ಬಗ್ಗೆ ರೈತ ಜನಾಂಗದ ಅಪೇಕ್ಷೆಗಳೇನೆಂಬುದನ್ನು ವ್ಯಕ್ತಗೊಳಿಸುವ ಉದ್ದೇಶದಿಂದ ಈ ಸಮ್ಮೇಳನ ಕರೆಯಲಾಗಿತ್ತೆಂದು ಶ್ರೀ ಬಸವರಾಜ ಕಟ್ಟೀಮನಿಯವರ ಹೇಳಿದರು. ಈ ವಿಚಾರದಲ್ಲಿ ಅವರಿಗೆ ಇರುವ ತಳಮಳವು ಪ್ರಾಮಾಣಿಕತನದ್ದಿದ್ದರೂ ಅವರು ತಮ್ಮ ಭೋಳೆ ಸ್ವಭಾವದಿಂದ ರೈತರ ಹಿತಸಂಬಂಧಗಳನ್ನು ಕಡೆಗಣಿಸಿ ಅವುಗಳೊಡನೆ ಚಿನ್ನಾಟವಾಡುತ್ತಿರುವ ಕಾಂಗ್ರೆಸ್ಸಿಗರೊಂದಿಗೆ ಸೇರಿಕೊಂಡು ಕಾಂಗ್ರೆಸ್ಸಿಗರ ಕುಚೇಷ್ಟೆಗಳಿಗೆ ಸಹಾಯಕರಾದರಲ್ಲ ಎಂದು ವ್ಯಥೆಯಿಂದ ಇಲ್ಲಿ ಹೇಳಬೇಕಾಗಿದೆ. ಇಂಥವುಗಳಿಂದ ರೈತ ಜನಾಂಗಕ್ಕೆ ಹಾನಿಯಾಗುತ್ತದೆಯೆಂಬ ಅನುಭವ ಶ್ರೀ ಕಟ್ಟೀಮನಿಯವರಿಗೆ ಈಗಾಗಲೇ ಬಂದಿದ್ದರೂ ಮತ್ತೆ ಇಂಥವರೊಂದಿಗೆ ಸೇರಿಕೊಂಡುದು ರೈತರ ದುರ್ದೈವವೇ ಸರಿ. ಕುಂದರ ನಾಡಿನ ರೈತ ಶಕ್ತಿಯ ಜಾಗೃತಿಯನ್ನು ಕಾಂಗ್ರೆಸ್ಸಿಗರು ಮೊಟಕು ಮಾಡುತ್ತಿರುವುದೂ ಶ್ರೀ ಕಟ್ಟೀಮನಿಯವರಿಗೆ ಗೊತ್ತು. ಕುಂದರ ನಾಡಿನ ಈ ರೈತ ಸಮ್ಮೇಳನ ಕಾಂಗ್ರೆಸ್ಸಿಗರ ಪ್ರಚಾರ ಸಮ್ಮೇಳನವಾಗಿ ಪರ್ಯವಸಾನಹೊಂದುವದು ನಿರೀಕ್ಷಿಸಿದ ಮಾತಾಗಿತ್ತು. ಇದು ದುರ್ದೈವದ ಸಂಗತಿ.

ಬಿಜಾಪುರ—

ಹಟ್ಟಿ ಚಿನ್ನದ ಗಣಿ ಕೆಲಸಗಾರರಿಗೆ ಬೆಂಬಲ

ತಮ್ಮ ಬೇಡಿಕೆಗಳ ಸಲುವಾಗಿ ಸಂಪುಹೂಡಿರುವ ಹಟ್ಟಿ ಚಿನ್ನದಗಣಿ ಕೆಲಸಗಾರರಿಗೆ ಮತ್ತು ಉಪವಾಸ ಕೈಗೊಂಡಿರುವ ಯೂನಿಯನ್ನಿನ ಕಾರ್ಯದರ್ಶಿ ಇವರ ಉಪವಾಸಕ್ಕೆ ಬೆಂಬಲ ಕೊಡುವ ಶ್ರಿ ನಾರಾಯಣ್ ಇವರ ಸಂಬಂಧ ಮೈಸೂರು ಸರಕಾರದ ಕೂಲಿಗಾರ ನೀತಿಯನ್ನು ಖಂಡಿಸುವ, ಉತ್ತರ ಕರ್ನಾಟಕದ ರೆವಿನ್ಯೂ ಖಾತೆಯಲ್ಲಿರುವ ನೌಕರದಾರರಿಗೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಮಾಡಿರುವ ಅನ್ಯಾಯವನ್ನು ಖಂಡಿಸುವ ಲೋಕಲ್ ಬೋರ್ಡ್ ನೌಕರದಾರರ ಪಗಾರದಲ್ಲಿ ಕಡಿತ ಮಾಡಿದ್ದನ್ನು ವಿರೋಧಿಸುವ ಮತ್ತು ಮುನಿಸಿಪಲ್ ಕೆಲಸಗಾರರ ಬೇಡಿಕೆಗೆ ಬೆಂಬಲ ಕೊಡುವ ಠರಾವುಗಳು ತಾರೀಕು 7-10-58ರಂದು ಸೇರಿದ್ದ ಮುನಿಸಿಪಲ್ ಕಾಮಗಾರ ಯೂನಿಯನ್ನಿನ ಮತ್ತು ಕಮ್ಯೂನಿಸ್ಟ್ ಪಾರ್ಟಿಯ ಸಾರ್ವಜನಿಕ ಸಭೆಯಲ್ಲಿ ಪಾಸಾದುವು. ಶ್ರೀ ಬಿ. ವೈ. ಕಲಾದಗಿಯವರು ಅಧ್ಯಕ್ಷತೆ ವಹಿಸಿದ್ದರು. ಎನ್. ಕೆ. ಉಪಾಧ್ಯಾಯರು ಭಾಷಣ ಮಾಡಿ ನೌಕರದಾರರ ಮೇಲೆ ಮೈಸೂರು ಸರಕಾರದವರು ಮಾಡುತ್ತಿರುವ ಅನ್ಯಾಯವನ್ನು ತಿಳಿಸಿ ಹೇಳಿದರು.

ತಾಷ್ಕೆಂಟಿನಲ್ಲಿ ಏಷ್ಯಾ-ಆಫ್ರಿಕಾ ಲೇಖಕರ ಮಹಾಸಮ್ಮೇಳನದ ಆರಂಭ

ಏಷ್ಯಾ—ಆಫ್ರಿಕಾ ಜೀವನದಲ್ಲೇ ಮಹತ್ವಪೂರ್ಣ ಸಂಭವ

ಸೋವಿಯತ್‌ದೇಶದ ತಾಷ್ಕೆಂಟ್‌ನಗರದಲ್ಲಿ ಆಫ್ರಿಕಾ-ಏಷಿಯಾಗಳ ಲೇಖಕರ ಮಹಾಸಮ್ಮೇಳನ ಈ ತಿಂಗಳ ೭ನೆಯ ತಾರೀಖಿನಿಂದ ಆರಂಭವಾಗಿದೆ. ಈ ಲೇಖಕರ ಮಹಾಸಮ್ಮೇಳನವು ಈ ಎರಡು ಖಂಡಗಳ ಮತ್ತು ಇಡೀ ಜಗತ್ತಿನ ಜನತೆಗಳ ಸಾಂಸ್ಕೃತಿಕ ಜೀವನದಲ್ಲಿ ಒಂದು ಮಹತ್ತರ ಸಂಭವವಾಗಿದೆ. ಕೈರೋವಿನಲ್ಲಿರುವ ಆಫ್ರಿಕಾ-ಏಶಿಯಾ ಐಕ್ಯತಾ ಸಮ್ಮೇಲನದ ಕರೆಗೆ ಓಗೊಟ್ಟು ಏಶಿಯಾ-ಆಫ್ರಿಕಾಗಳ ೫೦ ದೇಶಗಳ ಲೇಖಕರು ಇದರಲ್ಲಿ ಭಾಗವಹಿಸುತ್ತಿದ್ದಾರೆ. ಈ ಸಮ್ಮೇಲನದ ಮುಂದೆ ಎರಡು ಮೂಲಭೂತ ಮುಖ್ಯ ಸಮಸ್ಯೆಗಳಿವೆ: ಏಶಿಯಾ-ಆಫ್ರಿಕಾದೇಶಗಳಲ್ಲಿ ಸಾಹಿತ್ಯ-ಸಂಸ್ಕೃತಿಗಳ ಪ್ರಗತಿ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯ ಪ್ರಗತಿಗಳಿಗಾಗಿಯೂ ವಸಹಾತುವಾದದ ವಿರೋಧವಾಗಿಯೂ ವಿಶ್ವಶಾಂತಿಗಾಗಿಯೂ ನಡೆಯುವ ಹೋರಾಟದಲ್ಲಿ ಅವುಗಳ ಪಾತ್ರ; ಪಾಶ್ಚಿಮಾತ್ಯ ಸಂಸ್ಕೃತಿಗೆ ಸಂಬಂಧಿಸಿದಂತೆ ಏಶಿಯಾ-ಆಫ್ರಿಕಾ ಜನತೆಯ ಸಂಸ್ಕೃತಿಗಳ ಸಮಸ್ಯೆಗಳನ್ನು ಪರಿಶೀಲಿಸುವುದು.

ಮಾನವಕುಲವು ಅದರಲ್ಲೂ ಏಷ್ಯಾ-ಆಫ್ರಿಕಾಗಳ ಜನತೆಯು ಇಂದು ವಿಶೇಷ ಗಂಡಾಂತರ ಸ್ಥಿತಿಯಲ್ಲಿದೆ. ಇದರಿಂದ ಲೇಖಕರು ದೂರಾಗಿ ಉಳಿಯುವುದು ಸಾಧ್ಯವಿಲ್ಲ. ಈ ಸಂಬಂಧವುಳ್ಳ ಲೇಖಕರು ಈ ಉದ್ದೇಶ ಸಾಧನೆಯಲ್ಲಿ ತಮ್ಮ ಸ್ಥಾನವೇನೆಂಬುದನ್ನು ನಿರ್ದಿಷ್ಟಗೊಳಿಸಲು ಇಲ್ಲಿ ಸೇರಿದ್ದಾರೆ. ಇದರಿಂದ ಪರಸ್ಪರ ವಿಚಾರವಿನಿಮಯ, ಅನುಭವ ವಿನಿಮಯಗಳಾಗುವದಲ್ಲದೆ ಸ್ನೇಹಮಯವಾದ ಸಾಂಸ್ಕೃತಿಕ ಸಂಬಂಧಗಳನ್ನು ಸ್ಥಾಪಿಸಿ ವಿಸ್ತರಿಸಲು ಸಾಧ್ಯವಾಗುತ್ತದೆ. ನಮ್ಮಕಾಲದ ಮುಖ್ಯ ಸಮಸ್ಯೆಗಳ ಪರಿಷ್ಕಾರದಲ್ಲಿ ಪರಸ್ಪರ ಸೌಮನಸ್ಯವನ್ನೂ ಸಹಕಾರವನ್ನೂ ಬಲಪಡಿಸಲೂ ಸಾಧ್ಯವಾಗುತ್ತದೆ.

ಏಶಿಯಾ-ಆಫ್ರಿಕಾಖಂಡಗಳ ಪ್ರಗತಿಶೀಲ ಲೇಖಕರ ಮತ್ತು ಪಾಶ್ಚಿಮಾತ್ಯ ದೇಶಗಳ ಪ್ರಗತಿಶೀಲ ಸಾಹಿತ್ಯ ಕಲೆಗಳ ಪ್ರತಿನಿಧಿಗಳ ಮಧ್ಯೆ ಪರಸ್ಪರ ನಿಕಟ ಸಂಪರ್ಕಗಳ ಅಂಕುರಾರ್ಪಣವಾಗುವುದೇ ತಾಷ್ಕೆಂಟ್ ಸಮ್ಮೇಲನದ ಮುಖ್ಯ ಲಕ್ಷಣವಾಗಿದೆ.

ಸೋವಿಯತ್ ರಷ್ಯದ ಪ್ರಧಾನ ಮಂತ್ರಿ ನಿಕಿತಾ ಖ್ರುಶ್ಚೋವ್ ಸಮ್ಮೇಲನಕ್ಕೆ ಯಶ ಕೋರಿ ಸಂದೇಶ ಕಳಿಸಿದ್ದಾರೆ. 'ಪ್ರಾವ್ದಾ' ಪತ್ರಿಕೆಯು ಸಂಪಾದಕೀಯ ಬರೆಯುತ್ತ ಸಮ್ಮೇಲನಕ್ಕೆ ಲೇಖಕರನ್ನು ರಷ್ಯದ ಜನತೆಯ ಪರವಾಗಿ ಸ್ವಾಗತಿಸಿದೆ. ಆಫ್ರಿಕಾ—ಏಶಿಯಾಗಳ ಅನೇಕ ದೇಶಗಳ ಪ್ರಧಾನಿಗಳೂ ಶುಭಾಶಯ-ಸಂದೇಶಗಳನ್ನು ಕಳುಹಿಸಿದ್ದಾರೆ.

ಶಾಂತಿ ಸಂದೇಶ ಹೊರಡಿಸಿ

ಭಾರತ ದೇಶದ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ್ ನೆಹ್ರೂ ಅವರು ಈ ಸಮ್ಮೇಲನಕ್ಕೆ ಸಂದೇಶ ಕಳುಹಿಸುತ್ತ "ಈ ಸಮ್ಮೇಲನವು ಶಾಂತಿ — ಸದ್ಭಾವನೆಯ ಸಲುವಾಗಿ ಮನವಿಯನ್ನು ಹೊರಡಿಸಲಿ. ಸಮ್ಮೇಲನ ಯಶಸ್ವಿಯಾಗಲಿ" ಎಂದು ಹಾರೈಸಿದ್ದಾರೆ.

ಗುರುತರ ಜವಾಬ್ದಾರಿ

ಸಿಲೋನ್ ಪ್ರಧಾನಿ ಬಂಡಾರನಾಯಕೆಯವರು ಸಮ್ಮೇಲನಕ್ಕೆ ಶುಭ ಕೋರುತ್ತ "ಸಾಹಿತಿಗಳ ಆಶೆ—ಆಶಯ ಸುಖಸಮೃದ್ಧಿಗಳಿಗಾಗಿ ಜನತೆಗೆ ಸ್ಫೂರ್ತಿ ನೀಡುವಂಥದು, ನಮ್ಮ ಕಾಲದಲ್ಲಿ ಏಶಿಯಾ ಆಫ್ರಿಕಾಗಳ ಜನತೆಯು ಸ್ವಾತಂತ್ರ್ಯ ಪ್ರಗತಿಗಳಿಗಾಗಿ ಹೋರಾಡುತ್ತಿರುವಾಗ ಅಲ್ಲಿಯ ಲೇಖಕರ ಜವಾಬ್ದಾರಿ ಗುರುತರವಾದುದು" ಎಂದಿದ್ದರೆ ಬರ್ಮಾದ ಪ್ರಧಾನಿ ಊನುರವರು "ಈ ಸಮ್ಮೇಲನವು ಮಾನವ ಪ್ರತಿಭೆಯ ವಿಜಯವಾಗಿದೆ" ಎಂದಿದ್ದಾರೆ.

ಜನಾಧಿಪತ್ಯವಾದಿ ನಿಯಮಗಳನ್ನು ಎತ್ತಿಹಿಡಿಯಲಿ

ಭಾರತದ ಉಪ ರಾಷ್ಟ್ರಾಧ್ಯಕ್ಷರಾದ ಡಾ| ರಾಧಾಕೃಷ್ಣನ್‌ರವರು ಸಂದೇಶ ಕಳುಹಿಸುತ್ತ "ವ್ಯಕ್ತಿತ್ವದ ಬಿಡುಗಡೆ ಮತ್ತು ಸಾಮಾಜಿಕ ನ್ಯಾಯ ಎಂಬೀ ಎರಡು ಮೂಲಭೂತ ಜನಾಧಿಪತ್ಯವಾದೀ ನಿಯಮಗಳನ್ನು ಎತ್ತಿಹಿಡಿಯಲು ಲೇಖಕರು ಸಮರ್ಥರಾಗಲಿ ಮತ್ತು ಈ ಸಮಸ್ಯೆಗಳ ಶಾಂತಿಯುತ ಪರಿಷ್ಕಾರಕ್ಕಾಗಿ ಬೆಂಬಲ ನೀಡಲಿ" ಎಂದಿದ್ದಾರೆ.

ನಾಗರಿಕತೆಯನ್ನು ಊರ್ಜಿತಪಡಿಸುವ ಭಾರ

ಕರ್ನಾಟಕದ ಹೆಸರಾಂತ ಪತ್ರಿಕೋದ್ಯಮಿಗಳಾದ ಶ್ರೀ ಎಲ್. ಎಸ್. ಸೀತಾರಾಮ ಶಾಸ್ತ್ರಿ ಅವರು ಸಮ್ಮೇಳನಕ್ಕೆ ಸಂದೇಶ ಕಳುಹಿಸುತ್ತ "ತಾಷ್ಕೆಂಟನಲ್ಲಿ ಆಫ್ರಿಕಾ—ಏಶಿಯ ಲೇಖಕರ ಸಮ್ಮೇಳನ ಎಂಥ ಸವಾಲು! ಮಾನವ ಕುಲವು ಇವತ್ತು ಯಾವುದನ್ನು ಶ್ರೇಷ್ಠವೆಂದು ಭಾವಿಸುತ್ತದೆಯೊ ಅವುಗಳಲ್ಲಿ ಬಹುಪಾಲಿಗೆ ತವರಾದ, ಪ್ರಪಂಚದಲ್ಲಿ ಪ್ರತಿ ಐವರಿಗೂ ಮೂವರಂತಿರುವ ಬಣ್ಣದ ಜನಸ್ತೋಮಕ್ಕೆಲ್ಲ ತವರಾದ, ಪ್ರಪಂಚದ ಸಮಸ್ಯೆಗಳಿಗೆಲ್ಲ ಗುರಿಯಾಗಿ ಅವುಗಳನ್ನೆಲ್ಲ ಅರಗಿಸಿಕೊಳ್ಳುತ್ತಿರುವ ಆಫ್ರಿಕ-ಏಶಿಯ ಖಂಡಗಳ ವಾರ್‌ಬ್ರಹ್ಮರ ಸಭೆ! ಬಣ್ಣ-ಕುಲ ಎಂಬ ಯಾವ ಭೇದಭಾವವನ್ನೂ ಇಟ್ಟುಕೊಳ್ಳದೆ ಇರುವ ರಷ್ಯದ ತಾಷ್ಕೆಂಟನಲ್ಲಿ ತಾನೆ ಇಂಥ ಸಭೆ ಸೇರಬೇಕು. ನಾಗರಿಕತೆಯನ್ನು ಪ್ರಾರಂಭಿಸಿದವರು ಬಣ್ಣದವರು, ನಾಗರಿಕತೆಯನ್ನು ರೂಢಿಸಿದವರು ಬಣ್ಣದವರು. ಇವತ್ತು ನಾಗರಿಕತೆಯನ್ನು ಕಾಪಾಡಬೇಕಾಗಿರುವವರು ಬಣ್ಣದವರಾದ ನಾವೆ. ಸಂಖ್ಯೆ ಸಹಿಷ್ಣುತೆ ಸಹಜೀವನ ನಮ್ಮದು. ನೆನ್ನೆ ನಮ್ಮದು, ನಾಳೆ ನಮ್ಮದು. ಇಂದಿನ ಸಂಧಿಯಲ್ಲಿ ನಾಗರಿಕತೆಯನ್ನು ಒಪ್ಪವಿಟ್ಟುಕೊಂಡು ಊರ್ಜಿತಪಡಿಸುವ ಭಾರ ನಮ್ಮದೇ ಆಗಿದೆ. ತಾಷ್ಕೆಂಟ್ ಇದಕ್ಕೆ ಮಾರ್ಗದರ್ಶನ ಮಾಡಲಿ. ಆಫ್ರಿಕ—ಏಶಿಯ ಬರೆಹಗಾರರ ಲೇಖನಿಗಳಿಗೆ ವಿಜಯವಾಗಲಿ!" ಎಂದಿದ್ದಾರೆ.

ಬಾಂಧವ್ಯ ದೃಢವಾಗಲಿ

ಕರ್ನಾಟಕದ ಪ್ರಮುಖ ಪುರೋಗಾಮಿ ಲೇಖಕರಾದ ಶ್ರೀ ಬಸವರಾಜ ಕಟ್ಟೀಮನಿ ಅವರು ಸಮ್ಮೇಲನಕ್ಕೆ ಸಂದೇಶ ಕಳುಹಿಸುತ್ತ "ಪಂಚಶೀಲ ತತ್ವಗಳಿಗನುಸಾರವಾಗಿ ಲೋಕದಲ್ಲಿ ಶಾಂತಿಯನ್ನು ನೆಲೆಗೊಳಿಸಲು ಹೃತ್ಪೂರ್ವಕವಾಗಿ ಹೋರಾಡುತ್ತಿರುವ ನಮ್ಮ ಮಿತ್ರರಾಷ್ಟ್ರವಾದ ಸೋವಿಯತ್ ಒಕ್ಕೂಟದ ತಾಷ್ಕೆಂಟ್ ನಗರದಲ್ಲಿ ಆಫ್ರಿಕನ್ ಮತ್ತು ಏಷ್ಯನ್ ಲೇಖಕರ ಸಮ್ಮೇಳನ ನಡೆಯಲಿರುವುದು, ವಿಶ್ವಬಂಧುತ್ವದ ನಂಬುಗೆಯುಳ್ಳ ಸರ್ವರಿಗೂ ಉತ್ಸಾಹವನ್ನುಂಟುಮಾಡುವ ವಿಚಾರವಾಗಿದೆ. ಶೋಷಕ ವರ್ಗಗಳ ಹಿಡಿತದಿಂದ ಬಿಡುಗಡೆ ಹೊಂದಿ, ಸ್ವಾತಂತ್ರ್ಯ ಮತ್ತು ಸಮತೆಗಳ ಕಡೆಗೆ ಧಾವಿಸುತ್ತಿರುವ ಆಫ್ರಿಕನ್ ಮತ್ತು ಏಷ್ಯನ್ ಜನತೆಯ ಪ್ರತಿನಿಧಿಗಳಾದ ಸಾಹಿತಿಗಳು, ಈ ಎರಡು ಭೂಖಂಡಗಳ ವಿಶಿಷ್ಟ ಸಮಸ್ಯೆಗಳಗಳನ್ನು ಗಮನದಲ್ಲಿಟ್ಟುಕೊಂಡು ಸಾಹಿತ್ಯಿಕ ವಿಚಾರಗಳನ್ನು ಕುರಿತು ಚರ್ಚಿಸುವರೆಂದು ಭಾವಿಸಿದ್ದೇನೆ. ಸಮ್ಮೇಳನ ಯಶಸ್ವಿಯಾಗಿ ನಡೆಯಲಿ. ಆಫ್ರಿಕನ್—ಏಷ್ಯನ್—ರಷ್ಯನ್ ಬಾಂಧವ್ಯ ದೃಢವಾಗಲಿ" ಎಂದಿದ್ದಾರೆ.

ಸ್ವಲ್ಪದರಲ್ಲಿ ಸುದ್ದಿ

(೨ನೇ ಪುಟದಿಂದ)

ಈ ನೀತಿಯನ್ನು ಇನ್ನಷ್ಟು ಬಲಪಡಿಸಲು ಸರಕಾರವು ಒಡೆತನ ಪಡೆದಿರುವ ಇನ್ನೂ ನಾಲ್ಕು ಉದ್ಯಮಗಳ ಮ್ಯಾನೇಜಿಂಗ್ ಕೌನ್ಸಿಲ್ಲುಗಳಲ್ಲಿ ಕಾರ್ಮಿಕರಿಗೆ ಪ್ರಾತಿನಿಧ್ಯ ನೀಡಲಾಗಿದೆ. ಇದು ಕ್ರಮೇಣ ಸರಕಾರದ ಎಲ್ಲಾ ಔದ್ಯೋಗಿಕ ಕ್ಷೇತ್ರಗಳಿಗೂ ವ್ಯಾಪಿಸುವದು. ಸಣ್ಣ ಪುಟ್ಟ ಉದ್ಯಮಗಳ ಅಭಿವೃದ್ಧಿಗಾಗಿ ಸರಕಾರವು ಕಾರ್ಮಿಕರ ಸಹಕಾರಿ ಸಂಘಗಳ ರಚನೆಗೆ ಪ್ರೋತ್ಸಾಹ ನೀಡುತ್ತಿದೆ.

ಸೋವಿಯತ್ ಶಸ್ತ್ರಚಿಕಿತ್ಸಕರ ಅಚ್ಚರಿ ಪ್ರಯೋಗ

ಸುಪ್ರಸಿದ್ಧ ಸೋವಿಯತ್ ಶರೀರಶಾಸ್ತ್ರಜ್ಞರಾದ ಪ್ರೊಫೆಸರ್ ವ್ಲದೀಮಿರ್ ದೆಮಿಖೋವ್‌ರವರು, ನಾರ್ವೆದೇಶದ ಈರ್ವರು ಶಸ್ತ್ರಚಿಕಿತ್ಸಕರ ಸಮ್ಮುಖದಲ್ಲಿ ಚೆನ್ನಾಗಿ ಬೆಳೆದ ನಾಯಿಗೆ ನಾಯಿಕುನ್ನಿಯೊಂದರ ತಲೆಯೊಂದನ್ನು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆಯ ಮೂಲಕ ಜೋಡಿಸಿದರು. ಡಾ|| ದೆಮಿಖೋವ್‌ರವರು ತಮ್ಮ ಈ ಮೌಲಿಕ ವಿಧಾನವನ್ನು ಅತ್ಯಂತ ನೈಪುಣ್ಯತೆಯಿಂದ ಪ್ರದರ್ಶಿಸಿದರು. ನಾಯಿಮರಿಯ ತಲೆಯನ್ನು, ಅವರ ಪಂಜ ಮತ್ತು ಮುಖ್ಯ ರಕ್ತನಾಳಗಳೊಂದಿಗೆ ಅವರು ಪ್ರತ್ಯೇಕಿಸಿದರು. ಈ ರಕ್ತನಾಳಗಳನ್ನು ಬೆಳೆದ ನಾಯಿಯ ತಲೆಗೆ ರಕ್ತವನ್ನೊಯ್ಯುವ ಮುಖ್ಯ ರಕ್ತನಾಳಕ್ಕೆ ಜೋಡಿಸಲಾಯಿತು, ಮತ್ತು ಅದರ ಕಂಠಾಭಿಧಮನಿಗೆ ಜೋಡಿಸಲಾಯಿತು. ಶಸ್ತ್ರ ಚಿಕಿತ್ಸೆಯಲ್ಲಿ ನಿರ್ಮಿತವಾದ 'ಸೋವಿಯತ್ ಸ್ಪುಟ್ನಿಕ್' ಎಂದು ವಿದೇಶೀ ಚಿಕಿತ್ಸಕರು ಕರೆಯುತ್ತಿರುವ, ರಕ್ತನಾಳಗಳನ್ನು ಹೊಲಿಯುವ ಯಂತ್ರವನ್ನು ಈ ಶಸ್ತ್ರಚಿಕಿತ್ಸೆಯಲ್ಲಿ ಬಳಸಲಾಯಿತು.

ಈ ಪ್ರಯೋಗವು ಯಶಸ್ವಿಯಾಯಿತು. ಹೊಸ ತಲೆಯನ್ನು ಜೋಡಿಸಲಾಗಿರುವ ನಾಯಿಯು ಆರೋಗ್ಯವಾಗಿದೆ. ಅದರ ಎರಡು ತಲೆಗಳೂ ಹೊರಗಿನ ಸ್ಪರ್ಶಾನುಭವಕ್ಕೆ ಪ್ರತಿಕ್ರಿಯೆ ತೋರಿಸುತ್ತವೆ; ಆಹಾರವನ್ನು ತೆಗೆದುಕೊಳ್ಳುತ್ತವೆ.

ಅಂಗಾಂಗಗಳ ಸ್ಥಳಾಂತರದ ಪ್ರಯೋಗಗಳಿಗಾಗಿ ಸೋವಿಯತ್ ನಾಡಿನಲ್ಲಿ ಡಾ|| ವ್ಲದೀಮಿರ್ ದೆಮಿಖೋವ್‌ರವರು ಹೆಸರುವಾಸಿಯಾಗಿದ್ದಾರೆ. ಒಂದು ನಾಯಿಯಿಂದ ಇನ್ನೊಂದಕ್ಕೆ ಶ್ವಾಸಕೋಶಗಳನ್ನೂ, ಹೃದಯವನ್ನೂ ಸ್ಥಳಾಂತರಮಾಡಿ ಜೋಡಿಸುವ ಸೂಕ್ಷ್ಮ ಶಸ್ತ್ರಕ್ರಿಯೆಗಳನ್ನು ಅವರು ನಡೆಸಿದ್ದಾರೆ.

ಒಂದು ವಾರಕ್ಕೆ ಮೊದಲು ಇಂತಹ ಶಸ್ತ್ರಕ್ರಿಯೆಗೀಡಾಗಿದ್ದ ನಾಯಿಯೊಂದನ್ನು ಡಾ|| ವ್ಲದೀಮಿರ್ ದೆಮಿಖೋವರು ವಿದೇಶೀ ಅತಿಥಿಗಳಿಗೆ ತೋರಿಸಿದರು. 'ಬುಯಾನ್' ಎಂಬ ಹೆಸರಿನ ನಾಯಿಯು ಈಗ ಎರಡು ಹೃದಯಗಳನ್ನೂ, ಮೂರು ಶ್ವಾಸಕೋಶಗಳನ್ನೂ ಹೊಂದಿ ಆರೋಗ್ಯವಾಗಿ ಜೀವಿಸುತ್ತಿದೆ.

"ಮನುಷ್ಯನಲ್ಲಿ ಅತ್ಯಂತ ಆಶಾರಹಿತ ಸ್ಥಿತಿಯಲ್ಲಿರುವ ಪ್ರಾಣಾಧಾರ ಅಂಗಗಳ ಸ್ಥಾನದಲ್ಲಿ ಹೊಸ ಅಂಗಗಳನ್ನು ಜೋಡಿಸುವುದೇ ನಮ್ಮ ಪ್ರಯೋಗಗಳ ಅಂತಿಮ ಲಕ್ಷ್ಯವಾಗಿದೆ. ಮುಂದೆ ನಾವು ಅನೇಕ ಎಡರುಗಳನ್ನೆದುರಿಸಬೇಕಾಗಿದೆ. ಆದರೆ ಅವುಗಳನ್ನು ನಾವು ದಾಟಬಲ್ಲೆವು. ಯೌವನವನ್ನು ಆರೋಗ್ಯಸಾಧನೆಗಾಗಿ, ಆತನ ಜೀವಾವಧಿಯನ್ನು ದೀರ್ಘಗೊಳಿಸುವುದಕ್ಕಾಗಿ ನಡೆಸಲಾಗುವ ಹೋರಾಟದಲ್ಲಿ ಶಕ್ತಿಯುತವಾದ ನೂತನ ಅಸ್ತ್ರವನ್ನು ವೈದ್ಯಶಾಸ್ತ್ರವು ಪಡೆಯುವದೆಂಬ ಭರವಸೆ ನಮಗಿದೆ."—ಎಂದು ಡಾ|| ದೆಮಿಖೋವ್‌ರವರು 'ತಾಸ್' ಸುದ್ದಿಗಾರರೊಬ್ಬರಿಗೆ ತಿಳಿಸಿದರು.

ಇಂದಿನ ಆಹಾರ ಪರಿಸ್ಥಿತಿಗೆ ಸರಕಾರದ ಅನೀತಿಯೇ ಕಾರಣ

(ಮೊದಲನೇ ಪುಟದಿಂದ)

6. ತೀವ್ರವಾದ ಆಹಾರ ಬಿಕ್ಕಟ್ಟು ಒದಗಿರುವ ಪ್ರದೇಶಗಳಲ್ಲಿ ತೆಂಗೆ ಮತ್ತು ಕಂದಾಯ ಮಾಫಿ ಮಾಡಬೇಕು.

7. ವ್ಯವಸಾಯಗಾರರಿಗೆ ನಗದು ಹಣ ಮತ್ತು ಧಾನ್ಯಗಳನ್ನು ಉದಾರವಾಗಿ ಸಾಲ ನೀಡಬೇಕು.

8. ಮುಂದಿನ ಕುಯಿಲು ಕಾಲದಲ್ಲಿ ರೈತರಿಂದ ಸರಕಾರವು ಧಾನ್ಯಗಳನ್ನು ಕೊಳ್ಳಬೇಕು ಮತ್ತು ಸಾಕಷ್ಟು ದಾಸ್ತಾನನ್ನು ಶೇಖರಿಸಬೇಕು.

9. ಮುಂದಿನ ಅಲ್ಪಾವಧಿ ಭತ್ತದ ಬೆಳೆಗೆ ಉತ್ಪಾದಕರಿಗೂ ಮತ್ತು ಕೊಳ್ಳುವವರಿಗೂ ಕನಿಷ್ಟ ಹಾಗೂ ಪರಮಾವಧಿ ನ್ಯಾಯ ಬೆಲೆಗಳನ್ನು ಗೊತ್ತುಮಾಡಬೇಕು, ಪರಮಾವಧಿ ಬೆಲೆಯು ಕನಿಷ್ಠ ಬೆಲೆಗಿಂತ ಶೇಕಡ 15ರಷ್ಟು ಮೀರಿರಬಾರದು.

10. ವ್ಯಾಪಾರಸ್ಥರು ಮತ್ತು ಭೂಜುಕೋರರಿಗೆ ಆಹಾರ ಧಾನ್ಯಗಳ ದಾಸ್ತಾನಿನ ಮೇಲೆ ಬ್ಯಾಂಕಿನಿಂದ ಸಾಲ ಮುಂಗಡ ಕೊಳ್ಳುವುದನ್ನು ತೀವ್ರವಾಗಿ ಕಡಿತಮಾಡಬೇಕು.

ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶಗಳಲ್ಲಿ ಸರಕಾರದ ಆಹಾರ ನೀತಿಯ ವಿರುದ್ಧ ಹೋರಾಟ ನಡೆಸಿ, ಕೆಲವು ಕ್ರಮಗಳನ್ನಾದರೂ ತೆಗೆದುಕೊಳ್ಳುವಂತೆ ಒತ್ತಾಯತಂದ ಜನತೆಗೆ ರಾಷ್ಟ್ರೀಯ ಮಂಡಲಿಯು ಅಭಿನಂದನೆ ಸಲ್ಲಿಸಿದೆ.

ವ್ಯವಸಾಯ ಉತ್ಪನ್ನವನ್ನು ಹೆಚ್ಚಿಸಲು ಉತ್ಪಾದಕ ಶಕ್ತಿಗಳನ್ನು ಬಿಡುಗಡೆ ಮಾಡುವಂಥ ಮೂಲಭೂತವಾದ ಭೂಸುಧಾರಣೆಗಳಿಗಾಗಿ ಹೋರಾಡುತ್ತ, ರೈತರು ಮತ್ತು ವ್ಯವಸಾಯ ಕೂಲಿಗಾರರು ಅಧಿಕ ಉತ್ಪಾದನೆ ಮಾಡಲು ಎಲ್ಲ ರೀತಿಯಲ್ಲಿಯೂ ಶ್ರಮಿಸಬೇಕೆಂದು ರಾಷ್ಟ್ರೀಯ ಮಂಡಲಿಯು ಗೊತ್ತುವಳಿಯಲ್ಲಿ ಕರೆಯಿತ್ತಿದೆ.

ಪಾಕೀಸ್ತಾನದ ಘಟನೆಗಳು

ಪಾಕೀಸ್ತಾನದಲ್ಲಿ ಇತ್ತೀಚಿಗೆ ರಾಜ್ಯಾಂಗ ವಿಸರ್ಜಿಸಲ್ಪಟ್ಟು, ಪ್ರಜಾಪ್ರಭುತ್ವವನ್ನು ತುಳಿದು ಸ್ಥಾಪಿತವಾಗಿರುವ ಮಿಲಿಟರಿ ಸರ್ವಾಧಿಕಾರದ ಬಗ್ಗೆ ರಾಷ್ಟ್ರೀಯ ಮಂಡಲಿಯ ಸಭೆಯು ತನ್ನ ಕಳವಳವನ್ನು ವ್ಯಕ್ತಗೊಳಿಸಿದೆ. ಪಾಕೀಸ್ತಾನದಲ್ಲಿ ಇಂದು ಸಂಭವಿಸಿರುವ ಘಟನೆಯು ಅಮೇರಿಕನ್ ಸಾಮ್ರಾಜ್ಯವಾದಿಯಿಂದ ಪ್ರಚೋದಿತವಾದುದಾಗಿದೆ ಮತ್ತು ಪಾಕೀಸ್ತಾನದ ಮಿಲಿಟರಿ ಸರ್ವಾಧಿಕಾರವು ಸಾಮ್ರಾಜ್ಯವಾದಿಗಳೊಂದಿಗೆ ಕೂಡಿಕೊಂಡಿರುವ ತೀವ್ರ ಪ್ರತಿಗಾಮಿತ್ವದ ಸಂಕೇತವಾಗಿದೆಯೆಂದೂ ಗೊತ್ತುವಳಿಯಲ್ಲಿ ಹೇಳಲಾಗಿದೆ.

ಪ್ರಜಾಪ್ರಭುತ್ವ ಸಂಸ್ಥೆಗಳ ಮೇಲೆ ಧಾಳಿ

ಕಾಂಗ್ರೆಸ್ ಸರಕಾರಗಳು ಮತ್ತು ಆಳುವ ವರ್ಗವು ಪ್ರಜಾಪ್ರಭುತ್ವ ಸಂಸ್ಥೆಗಳನ್ನು ಅಲ್ಲಗಳೆಯುವ ಅನೂಚಾನವಾಗಿ ಬಂದಿರುವ ಪಾರ್ಲಿಮೆಂಟರಿ ಪರಂಪರೆಗಳನ್ನು ಮುರಿಯುವ ಮನೋಭಾವವನ್ನು ಹೆಚ್ಚು ಹೆಚ್ಚಾಗಿ ತೋರ್ಪಡಿಸುತ್ತಿರುವುದನ್ನು ರಾಷ್ಟ್ರೀಯ ಮಂಡಲಿಯು ಕಳಕಳಿಯಿಂದ ಗಮನಿಸುತ್ತದೆ.

ಉತ್ತರಪ್ರದೇಶದ ವಿಧಾನ ಸಭೆಯಲ್ಲಿ ವಿರೋಧ ಪಕ್ಷಗಳ ಸದಸ್ಯರನ್ನು ಹೊರ ಹಾಕಲು ಸಶಸ್ತ್ರ ಪೋಲೀಸರನ್ನು ಕರೆತಂದುದು, ಕೇರಳದಲ್ಲಿ ಕಾಂಗ್ರೆಸ್ ಪಕ್ಷವು ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗುವುದಕ್ಕೆ ಉತ್ತೇಜನ ನೀಡುತ್ತಿರುವುದು, ಪಶ್ಚಿಮ ಬಂಗಾಳದಲ್ಲಿನಂತೆ ಎಲ್ಲ ವಿರೋಧ ಪಕ್ಷಗಳೂ ವಿಧಾನ ಸಭೆ ಸೇರಿಸಬೇಕೆಂದು ಒತ್ತಾಯ ಪಡಿಸಿದರೂ ಸಹ ಅದನ್ನು ತಿರಸ್ಕರಿಸಿರುವುದು, ವಿರೋಧ ಪಕ್ಷಗಳ ಸದಸ್ಯರ ಸೂಕ್ತ ಸಲಹೆಗಳನ್ನು ಕಡೆಗಣಿಸುವುದು, ವಿಧಾನ ಸಭೆಗಳಲ್ಲಿ ಸಭಾಧ್ಯಕ್ಷರುಗಳ ಮೇಲೆ ಪ್ರಭಾವ ಬೀರಿ ಒತ್ತಾಯ ತರುವುದು, ಇವು ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಬೆಳವಣಿಗೆಗೆ ಧಕ್ಕೆ ತಂದಿದೆ. ಈ ಘಟನೆಗಳು ಕಾಂಗ್ರೆಸ್ ನಾಯಕರುಗಳಿಗೆ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಪದ್ಧತಿಯು ಕೇವಲ ಪ್ರಚಾರಕ್ಕೆ ಮಾತ್ರವಲ್ಲದೆ ಆಚರಣೆಯಲ್ಲಿ ತರುವುದಕ್ಕಾಗಿಯಲ್ಲ ಎಂಬುದನ್ನು ವ್ಯಕ್ತಗೊಳಿಸುತ್ತದೆ. ಈ ಮನೋಭಾವವನ್ನು ಎದುರಿಸದಿದ್ದಲ್ಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವಕ್ಕೆ ಭವಿಷ್ಯವೇ ಇಲ್ಲವಾಗುತ್ತದೆ.

ಪಂಚಾಯತ್ ಮತ್ತು ಇತರ ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ಮೊಟಕು ಮಾಡಿ, ಅವುಗಳನ್ನು ನೌಕರಶಾಹಿಯ ಅಧೀನಕ್ಕೊಳಪಡಿಸುವ ಮತ್ತು ಸಂಪೂರ್ಣವಾಗಿ ಅವನ್ನು ಕಡೆಗಣಿಸುವ ಪ್ರವೃತ್ತಿಯು ಇದೆ.

ಇತ್ತೀಚೆಗೆ, ಕೇಂದ್ರ ಸರಕಾರವು ತನ್ನ ಪಕ್ಷದ ಹಿತಚಿಂತನೆಯಿಂದ ಕಾಂಗ್ರೆಸ್ಸೇತರ ರಾಜ್ಯ ಸರಕಾರವೊಂದರ ಪತ್ರ ವ್ಯವಹಾರವನ್ನು ರಹಸ್ಯವಾಗಿರಿಸಬೇಕೆಂದು ಹೇಳಿದ್ದರೂ ಸಹ, ಸಂವಿಧಾನ ರೀತ್ಯ ಕೇಂದ್ರ ಸರಕಾರಕ್ಕೆ ರಹಸ್ಯವಾಗಿರಿಸುವ ಹೊಣೆಗಾರಿಕೆಯಿದ್ದರೂ ಸಹ ಅದನ್ನು ಕಡೆಗಣಿಸಿರುವುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಆಡಳಿತೆಯಲ್ಲಿ ಪ್ರವೇಶ ಮಾಡುವುದಿಲ್ಲವೆಂದು ಸಾರುತ್ತಿದ್ದರೂ ಸಹ, ಕಾಂಗ್ರೆಸ್ ಮಂತ್ರಿಗಳು ಮತ್ತು ಪಕ್ಷದವರೂ ದೈನಂದಿನ ಆಡಳಿತ ವ್ಯವಹಾರಗಳಲ್ಲಿ ತಲೆ ಹಾಕುತ್ತಿದ್ದಾರೆ.

ಒರಿಸ್ಸಾದಲ್ಲಿ ಮಂತ್ರಿ ಮಂಡಲದ ಬಿಕ್ಕಟ್ಟು ತಲೆದೋರಿದಾಗ, ರಾಜ್ಯಪಾಲರು ದೆಹಲಿಗೆ ತೆರಳಿ ಕಾಂಗ್ರೆಸ್ ನಾಯಕರುಗಳನ್ನು ಮತ್ತು ಕೇಂದ್ರ ಸರಕಾರದ ನಾಯಕರುಗಳನ್ನು ಭೇಟಿಮಾಡಿ ವಿರೋಧ ಪಕ್ಷಗಳು ಸರಕಾರ ರಚಿಸುವುದಕ್ಕೆ ಅವಕಾಶವೀಯದಂತೆ ಕಾಂಗ್ರೆಸ್ಸೇ ಅಧಿಕಾರದಲ್ಲಿರಲು ನೆರವು ನೀಡಿದ್ದು ಎಲ್ಲರಿಗೂ ತಿಳಿದಿದೆ.

ಪ್ರಜಾಪ್ರಭುತ್ವ ಸಂಸ್ಥಾನಗಳ ಮೇಲೆ ನಡೆಸಲಾಗುತ್ತಿರುವ ಈ ಕುತಂತ್ರಗಳು ಮತ್ತು ಧಾಳಿಯನ್ನು ಎದುರಿಸಿ, ಪ್ರಜಾಪ್ರಭುತ್ವದ ರಕ್ಷಣೆಗೆ ಶ್ರಮಿಸಬೇಕೆಂದು ರಾಷ್ಟ್ರೀಯ ಮಂಡಲಿಯು ಈ ಬಗ್ಗೆ ಅನುಮೋದಿಸಿರುವ ನಿರ್ಣಯದಲ್ಲಿ ಜನತೆಗೆ ಕರೆಯಿತ್ತಿದೆ.

ಜನತಾ ಚೀಣದ ವಿರುದ್ಧ ಅಮೇರಿಕದ ಆಕ್ರಮಣ

ಜನತಾ ಚೀಣಕ್ಕೆ ನ್ಯಾಯವಾಗಿ ಸೇರಬೇಕಿರುವ ತೈವಾನ್ ಪ್ರದೇಶದಲ್ಲಿ ಅಮೇರಿಕವು ನೌಕಾಪಡೆಯನ್ನು ತಂದಿರಿಸಿಕೊಂಡು ತನ್ನ ಬಾಲ ಬಡುಕ ಚಿಯಾಂಗನನ್ನು ರಕ್ಷಿಸಲು ಆಕ್ರಮಣಕಾರೀ ಕೃತ್ಯಗಳಲ್ಲಿ ತೊಡಗಿರುವುದನ್ನು ರಾಷ್ಟ್ರೀಯ ಮಂಡಲಿಯು ಅನುಮೋದಿಸಿರುವ ಗೊತ್ತುವಳಿಯಲ್ಲಿ ಖಂಡಿಸಿದೆ ಅಮೇರಿಕನ್ ನೌಕಾಪಡೆಯು ಕೂಡಲೇ ಫಾರ್ಮೋಸ ದ್ವೀಪದಿಂದ ಕಾಲ್ತೆಗೆಯಬೇಕೆಂದೂ, ಚೀಣದ ತೀವ್ರ ಪ್ರದೇಶದಲ್ಲಿರುವ ಕ್ವಿಮಾಯ್ ಮತ್ತು ಮಟ್ಸು ದ್ವೀಪಗಳನ್ನು ಕೂಡಲೇ ಬಿಟ್ಟು ತೆರಳಬೇಕೆಂದೂ ನಿರ್ಣಯದಲ್ಲಿ ಒತ್ತಾಯಪಡಿಸಲಾಗಿದೆ.

ಇತರ ನಿರ್ಣಯಗಳು

ಚೀಣಾ ಜನತಾ ರಿಪಬ್ಲಿಕ್‌ನ ಒಂಭತ್ತನೆಯ ವಾರ್ಷಿಕೋತ್ಸವದಂದು ಚೀಣದ ಜನತೆಯನ್ನು ಸರಕಾರವನ್ನು ಅಭಿನಂದಿಸುವ ಅಕ್ಟೋಬರ್ ಮಹಾ ಕ್ರಾಂತಿಯ 41ನೆಯ ವಾರ್ಷಿಕೋತ್ಸವದಂದು ಸೋವಿಯತ್ ಜನತೆಯನ್ನು ಅಭಿನಂದಿಸುವ ಫ್ರಾನ್ಸಿನಲ್ಲಿ ಜನರಲ್ ಡಿಗಾಲ್ ಸರ್ವಾಧಿಕಾರವನ್ನು ಎದುರಿಸಿ ಹೋರಾಡುತ್ತಿರುವ ಫ್ರೆಂಚ್ ಜನತೆ ಮತ್ತು ಫ್ರೆಂಚ್ ಕಮ್ಯೂನಿಸ್ಟ್ ಪಾರ್ಟಿಯನ್ನು ಅಭಿನಂದಿಸುವ, ನೂತನವಾಗಿ ಸ್ಥಾಪಿತವಾಗಿರುವ ತಾತ್ಕಾಲಿಕ ಆಲ್ಜೀರಿಯನ್ ಸ್ವತಂತ್ರ ಸರಕಾರವನ್ನು ಅಭಿನಂದಿಸುವ ಮತ್ತು ಭಾರತ ಸರಕಾರವು ಕೂಡಲೇ ಈ ತಾತ್ಕಾಲಿಕ ಸರಕಾರಕ್ಕೆ ಮಾನ್ಯತೆ ಈಯಬೇಕೆಂದೂ ಒತ್ತಾಯ ಪಡಿಸುವ ಗೊತ್ತುವಳಿಗಳನ್ನು ಅಂಗೀಕರಿಸಲಾಗಿದೆ. ಜಮ್‌ಷೆಡ್‌ಪುರದಲ್ಲಿ ಕಾರ್ಮಿಕರ ಮೇಲೆ ನಡೆದ ಅಮಾನುಷ ದಬ್ಬಾಳಿಕೆಯನ್ನು ಇನ್ನೊಂದು ನಿರ್ಣಯದಲ್ಲಿ ಖಂಡಿಸಲಾಗಿದೆ.

ಕೇರಳದ ಬಗ್ಗೆ ರಾಷ್ಟ್ರೀಯ ಮಂಡಲಿಯು ದೀರ್ಘವಾದ ಗೊತ್ತುವಳಿಯನ್ನು ಅಂಗೀಕರಿಸಿದೆ (ಅದರ ಪೂರ್ಣ ಪಾಠ ಮೂರನೆ ಪುಟದಲ್ಲಿ ಕೊಡಲಾಗಿದೆ.)

REG. No. M 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2

phone· 3810